# ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರ ಐವತ್ತಾರನೆಯ ಅಧಿವೇಶನದ ಉಪವೇಶನವು ದಿನಾಂಕ: 11.08.2025 ರಿಂದ 22.08.2025ರವರೆಗೆ ಒಟ್ಟು 08 ದಿನಗಳ ಕಾಲ ನಡೆಯಿತು. ಅಧಿವೇಶನದ ಒಟ್ಟು ಅವಧಿ 55.25 ಗಂಟೆ. **(ವಿವರಣಾ ಪಟ್ಟಿ–1)**

## 01. ಸಂತಾಪ ಸೂಚನೆಗಳು

**ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.**

| ಕ್ರ. ಸಂ | ಹೆಸರು ಶ್ರೀಯುತರುಗಳಾದ: | ಹೊಂದಿದ ಸ್ಥಾನಮಾನ | ದಿನಾಂಕ |
|---|---|---|---|
| 1 | ಡೇವಿಡ್ ಸಿಮೆಯೋನ್ | ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳು, ಮಾಜಿ ಉಪ ಸಭಾಪತಿಗಳು ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರು | 11.08.2025 |
| 2 | ಡಾ: ಎನ್. ತಿಪ್ಪಣ್ಣ | ವಿಧಾನ ಪರಿಷತ್ತಿನ ಮಾಜಿ ಸಭಾಪತಿಗಳು ಹಾಗೂ ವಿಧಾನ ಪರಿಷತ್ತಿನ ಮಾಜಿ ಶಾಸಕರು | 11.08.2025 |
| 3 | ಬೇಗಾನೆ ರಾಮಯ್ಯ | ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಶಾಸಕರು | 11.08.2025 |
| 4 | ಡಾ: ಕೆ. ಕಸ್ತೂರಿರಂಗನ್ | ಭಾರತದ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿ | 11.08.2025 |
| 5 | ಜಿ.ಎಸ್. ಸಿದ್ದಲಿಂಗಯ್ಯ | ಖ್ಯಾತ ವಿಮರ್ಶಕ ಹಾಗೂ ಹಿರಿಯ ಸಾಹಿತಿ | 11.08.2025 |
| 6 | ಪ್ರೊ. ಸುಬ್ಬಣ್ಣ ಅಯ್ಯಪ್ಪನ್ | ಖ್ಯಾತ ಕೃಷಿ ವಿಜ್ಞಾನಿ | 11.08.2025 |
| 7 | ಡಾ: ಎಮ್.ಆರ್. ಶ್ರೀನಿವಾಸನ್ | ಹಿರಿಯ ಪರಮಾಣು ವಿಜ್ಞಾನಿ | 11.08.2025 |
| 8 | ಡಾ: ಹೆಚ್.ಎಸ್. ವೆಂಕಟೇಶ್ ಮೂರ್ತಿ | ಹಿರಿಯ ಸಾಹಿತಿಗಳು, ಅಂಕಣಕಾರರು ಹಾಗೂ ವಿಮರ್ಶಕರು | 11.08.2025 |
| 9 | ಡಾ: ಬಿ. ಸರೋಜಾದೇವಿ | ಭಾರತೀಯ ಸಿನಿಮಾ ರಂಗದ ನಟಿ | 11.08.2025 |
| 10 | ಡಾ: ಶರಣಬಸಪ್ಪ ಅಪ್ಪ | ಕಲಬುರಗಿಯ ಶರಣ ಸಂಸ್ಥಾನದ ಎಂಟನೆಯ ಪೀಠಾಧಿಪತಿಗಳು | 18.08.2025 |
| 11 | ಕುಮಾರ ಚಂದ್ರಶೇಖರನಾಥ ಸ್ವಾಮೀಜಿ | ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರು | 18.08.2025 |

## 02. ಕಾರ್ಯದರ್ಶಿಯವರ ವರದಿ

ದಿನಾಂಕ:04.03.2025ರಂದು ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಮಂಡಿಸಲಾಯಿತು **(ವಿವರಣಾ ಪಟ್ಟಿ–2)**.

## 03. ಪ್ರಶ್ನೆಗಳು

ದಿನಾಂಕ:11.08.2025 ರಿಂದ 22.08.2025ರವರೆಗೆ ನಡೆದ 156ನೇ ಅಧಿವೇಶನದಲ್ಲಿ ನಿಯಮ–72ರಡಿ ಸ್ವೀಕರಿಸಲಾದ ಒಟ್ಟು 134 ಸೂಚನೆಗಳ ಪೈಕಿ 65 ಸೂಚನೆಗಳಿಗೆ ಹಾಗೂ ನಿಯಮ–330ರಡಿ ಸ್ವೀಕರಿಸಲಾದ ಒಟ್ಟು 84 ಸೂಚನೆಗಳ ಪೈಕಿ 32 ಸೂಚನೆಗಳಿಗೆ ಮಾನ್ಯ ಸಭಾನಾಯಕರು ಉತ್ತರಗಳನ್ನು ಮಂಡಿಸಲಾಯಿತು.

## 04. ಶೂನ್ಯವೇಳೆ

ಪ್ರಸಕ್ತ ಅಧಿವೇಶನದಲ್ಲಿ ಮಂಡಿಸಲಾದ ಶೂನ್ಯವೇಳೆ ಪ್ರಸ್ತಾವನೆಗಳನ್ನು **ವಿವರಣಾ ಪಟ್ಟಿ–3**ರಲ್ಲಿ ವಿವರಿಸಿದೆ.

## 05. ಪ್ರಕಟಣೆಗಳು

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಮಧ್ಯಾಹ್ನ 1.30 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟವನ್ನು ಏರ್ಪಡಿಸಲಾಗಿದ್ದು, ಮಾನ್ಯ ಎಲ್ಲಾ ಶಾಸಕರುಗಳು ಭೋಜನ ಕೂಟದಲ್ಲಿ ಭಾಗವಹಿಸಬೇಕೆಂದು ಮಾನ್ಯ ಸಭಾಪತಿಯವರು ದಿನಾಂಕ:13.08.2025ರಂದು ಪ್ರಕಟಿಸಿದರು.

2. ದಿನಾಂಕ: 13.08.2025 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

   - ತಾತ್ಕಾಲಿಕ ಕಾರ್ಯಕ್ರಮದ ಪಟ್ಟಿಯ ರೀತ್ಯಾ ದಿನಾಂಕ:22.08.2025ರವರೆಗೆ ಪ್ರತಿ ದಿನ ಬೆಳಗ್ಗೆ 10.00 ಗಂಟೆಯಿಂದ ರಾತ್ರಿ 08.00 ಗಂಟೆಯವರೆಗೆ ಕಾರ್ಯಕಲಾಪಗಳನ್ನು ನಡೆಸುವುದು.
   - ವಿಧಾನ ಸಭೆಯಿಂದ ಸ್ವೀಕರಿಸಲಾಗುವ ವಿಧೇಯಕಗಳನ್ನು ಮಂಡಿಸಿ, ಪರ್ಯಾಲೋಚಿಸಿ ಅಂಗೀಕರಿಸುವುದು.
   - ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು, ಪೋಸ್ಕೋ (POSCO) ಕಾಯ್ದೆಯಡಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿರುವುದರಿಂದ ಮಕ್ಕಳ ಭವಿಷ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ತಪ್ಪಿಸಲು ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಸೂಕ್ತ ಅರಿವು ಮೂಡಿಸುವ ಶಿಕ್ಷಣ ನೀಡುವ ವ್ಯವಸ್ಥೆ ಜಾರಿಗೆ ತರುವ ಕುರಿತು ಬುಧವಾರ ದಿನಾಂಕ:20.08.2025ರಂದು ಮಧ್ಯಾಹ್ನ ಚರ್ಚೆಗೆ ಅವಕಾಶ ಕಲ್ಪಿಸಲಾಗಿದೆ.

4. ದಿನಾಂಕ:18.08.2025ರಂದು ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಶ್ರೀ ಬಿ.ಎಸ್.ಸುರೇಶ್(ಬೈರತಿ) ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ: ಎಂ.ಸಿ. ಸುಧಾಕರ್ ಅವರುಗಳು ದಿನಾಂಕ:19.08.2025ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಉಭಯ ಸದನಗಳ ಮಾನ್ಯ ಶಾಸಕರುಗಳಿಗೆ ಭೋಜನ ಕೂಟ ಏರ್ಪಡಿಸಿರುವ ಬಗ್ಗೆ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

5. ದಿನಾಂಕ:18.08.2025ರಂದು ಮಾನ್ಯ ಶಾಸಕರಾದ ಶ್ರೀ ಶರವಣ ಟಿ.ಎ. ಅವರು ಚಿನ್ನ ಲೇಪನದ ಬೆಳ್ಳಿ ಗಂಡುಭೇರುಂಡ ಬ್ಯಾಡ್ಜ್‌ನ್ನು ಮಾನ್ಯ ಶಾಸಕರುಗಳಿಗೆ ವಿತರಿಸುವ ಬಗ್ಗೆ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

6. ದಿನಾಂಕ:19.08.2025ರಂದು ವಿಶ್ವಪರಂಪರೆ ಹಿರೇಬೆಣಕಲ್ ಪ್ರಾಗೈತಿಹಾಸಿಕ ಚಿತ್ರಣಗಳ ಉದ್ಘಾಟನೆಯನ್ನು ದಿನಾಂಕ:19.08.2025ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಧ್ಯಾಹ್ನ 2.00 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ನೆರವೇರಿಸಲಿದ್ದು, ಸದರಿ ಕಾರ್ಯಕ್ರಮದಲ್ಲಿ ಎಲ್ಲಾ ಶಾಸಕರುಗಳು ಭಾಗವಹಿಸಬೇಕೆಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

7. ದಿನಾಂಕ:20.08.2025ರಂದು ನಡೆದ ಉಪವೇಶನದಲ್ಲಿ ರಾತ್ರಿ 12.00 ಗಂಟೆವರೆಗೆ ವಿಧೇಯಕದ ಮೇಲೆ ನಡೆದ ಸುದೀರ್ಘ ಚರ್ಚೆಗೆ ಮಾನ್ಯ ಸಭಾಪತಿಯವರು ದಿನಾಂಕ:21.08.2025ರಂದು ಅಭಿನಂದನೆಯನ್ನು ಸಲ್ಲಿಸಿದರು.

ನಮ್ಮ ಕರ್ನಾಟಕ ರಾಜ್ಯ ಬದ್ಧತೆಗೆ ಹೆಸರು ಮಾಡಿರುವುದು ನಮ್ಮೆಲ್ಲರ ಹೆಮ್ಮೆ, ಇದರಿಂದಾಗಿಯೇ ನಮ್ಮ ರಾಜ್ಯ ಯಾವತ್ತಿಗೂ ಇಡೀ ದೇಶಕ್ಕೆ ಮಾದರಿಯಾಗಿ ನಿಂತಿರುವುದೂ ಸಹ ಸರ್ವವೇದ್ಯವೇ ಆಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ:20.08.2025ರಂದು ಸದನವು ರಾತ್ರಿ 12.00 ಗಂಟೆಯವರೆಗೂ ಮಹತ್ತರವಾದ ಚರ್ಚೆಗಳನ್ನು ನಡೆಸಿ ಇಡೀ ರಾಷ್ಟ್ರವೇ ನಮ್ಮ ರಾಜ್ಯವನ್ನು ತಿರುಗಿ ನೋಡುವಂತೆ ಮಾಡಿದೆ. ಇದು ನಮ್ಮೆಲ್ಲರ ಹಿರಿಮೆಗೆ ಮತ್ತೊಂದು ಗರಿಯನ್ನು ಮೂಡಿಸಿದೆ. ಹೀಗೆ ಸರಿರಾತ್ರಿಯಾದರೂ ರಾಜ್ಯದ ಹಿತಾಸಕ್ತಿಯನ್ನು ಮನದಲ್ಲಿಟ್ಟುಕೊಂಡು ಗುಣಮಟ್ಟದ ಚರ್ಚೆಗಳನ್ನು ನಡೆಸಿ ವಿಧೇಯಕಗಳನ್ನು ಎಲ್ಲಾ ಆಯಾಮಗಳಲ್ಲಿ ಪರಾಮರ್ಶಿಸಿ ಸದನದ ಹಿರಿಮೆಯನ್ನು ಹೆಚ್ಚಿಸಲು ಸಹಕಾರ ನೀಡಿರುವ ಸನ್ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಭಾನಾಯಕರು, ಸಚಿವರುಗಳು, ವಿರೋಧ ಪಕ್ಷದ ನಾಯಕರು, ಸರ್ಕಾರಿ ಮುಖ್ಯ ಸಚೇತಕರು, ವಿರೋಧ ಪಕ್ಷದ ಮುಖ್ಯ ಸಚೇತಕರು, ಶಾಸಕರುಗಳು ಮತ್ತು ಸಿಬ್ಬಂದಿ ವರ್ಗದವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಮ್ಮ ಅವಧಿಯಲ್ಲಿ ಈ ರೀತಿಯ ಗುಣಮಟ್ಟದ ಚರ್ಚೆಗಳು ನಡೆಯುತ್ತಿರುವುದು ಸಂತೋಷದಾಯಕವಾಗಿದ್ದು, ದೇಶದಲ್ಲಿಯೇ ವಿಧಾನ ಪರಿಷತ್ತನ್ನು ಒಂದು ಮಾದರಿ ಸದನವನ್ನಾಗಿ ರೂಪಿಸುವುದಕ್ಕೆ ತಮ್ಮೆಲ್ಲರ ಸಹಕಾರ ಸದಾಕಾಲ ಹೀಗೆಯೇ ಮುಂದುವರೆಯಬೇಕೆಂದು ನನ್ನ ಅಭಿಲಾಷೆ. ತಮ್ಮೆಲ್ಲರಿಗೆ ಮತ್ತೊಮ್ಮೆ ನನ್ನ ವಂದನೆಗಳು.

## 06. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

01. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದನೇ ಮತ್ತು ಎರಡನೇ ಪಟ್ಟಿಗಳನ್ನು ದಿನಾಂಕ:11.08.2025ರಂದು ಸಭೆಯ ಮುಂದೆ ಮಂಡಿಸಲಾಯಿತು. **(ವಿವರಣಾ ಪಟ್ಟಿ –4)**

02. ದಿನಾಂಕ:19.08.2025ರಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕೃಷಿ ಸಚಿವರು ಮಾರ್ಚ್ 2023–2024ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯದ ಹಣಕಾಸಿನ ವ್ಯವಹಾರಗಳ ಲೆಕ್ಕಪರಿಶೋಧನಾ ವರದಿ (2025ರ ವರದಿ ಸಂಖ್ಯೆ–4)ಯನ್ನು ಸಭೆಯ ಮುಂದೆ ಮಂಡಿಸಿದರು.

03. ದಿನಾಂಕ:19.08.2025ರಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕೃಷಿ ಸಚಿವರು ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಕಂದಾಯದ ವರದಿ (2025ನೇ ವರ್ಷದ ವರದಿ ಸಂಖ್ಯೆ–5)ಯನ್ನು ಸಭೆಯ ಮುಂದೆ ಮಂಡಿಸಿದರು.

04. ದಿನಾಂಕ:19.08.2025ರಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕೃಷಿ ಸಚಿವರು 2020–2022ನೇ ಸಾಲಿನ ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಮೇಲಿನ ಸಂಯೋಜಿತ ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

05. ದಿನಾಂಕ:19.08.2025ರಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಕೃಷಿ ಸಚಿವರು ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅನುಸರಣಾ ಲೆಕ್ಕಪರಿಶೋಧನೆ ವರದಿ (2025ನೇ ವರ್ಷದ ವರದಿ ಸಂಖ್ಯೆ–3)ಯನ್ನು ಸಭೆಯ ಮುಂದೆ ಮಂಡಿಸಿದರು.

06. ದಿನಾಂಕ:20.08.2025ರಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣದ ವರದಿ (2025ರ ವರದಿ ಸಂಖ್ಯೆ–2) ಯನ್ನು ಸಭೆಯ ಮುಂದೆ ಮಂಡಿಸಿದರು.

07. ದಿನಾಂಕ:21.08.2025ರಂದು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಸಭಾನಾಯಕರು ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ (2025ರ ವರದಿ ಸಂಖ್ಯೆ–6)ಯನ್ನು ಸಭೆಯ ಮುಂದೆ ಮಂಡಿಸಿದರು.

08. ದಿನಾಂಕ:20.08.2025ರಂದು ನಡೆದ ಉಪವೇಶನದಲ್ಲಿ ರಾತ್ರಿ 12.00 ಗಂಟೆವರೆಗೆ ವಿಧೇಯಕದ ಮೇಲೆ ನಡೆದ ಸುದೀರ್ಘ ಚರ್ಚೆಗೆ ಮಾನ್ಯ ಸಭಾಪತಿಯವರು ದಿನಾಂಕ:21.08.2025ರಂದು ಅಭಿನಂದನೆಯನ್ನು ಸಲ್ಲಿಸಿದರು.

ನಮ್ಮ ಕರ್ನಾಟಕ ರಾಜ್ಯ ಬದ್ಧತೆಗೆ ಹೆಸರು ಮಾಡಿರುವುದು ನಮ್ಮೆಲ್ಲರ ಹೆಮ್ಮೆ, ಇದರಿಂದಾಗಿಯೇ ನಮ್ಮ ರಾಜ್ಯ ಯಾವತ್ತಿಗೂ ಇಡೀ ದೇಶಕ್ಕೆ ಮಾದರಿಯಾಗಿ ನಿಂತಿರುವುದೂ ಸಹ ಸರ್ವವೇದ್ಯವೇ ಆಗಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ:20.08.2025ರಂದು ಸದನವು ರಾತ್ರಿ 12.00 ಗಂಟೆಯವರೆಗೂ ಮಹತ್ತರವಾದ ಚರ್ಚೆಗಳನ್ನು ನಡೆಸಿ ಇಡೀ ರಾಷ್ಟ್ರವೇ ನಮ್ಮ ರಾಜ್ಯವನ್ನು ತಿರುಗಿ ನೋಡುವಂತೆ ಮಾಡಿದೆ. ಇದು ನಮ್ಮೆಲ್ಲರ ಹಿರಿಮೆಗೆ ಮತ್ತೊಂದು ಗರಿಯನ್ನು ಮೂಡಿಸಿದೆ. ಹೀಗೆ ಸರಿರಾತ್ರಿಯಾದರೂ ರಾಜ್ಯದ ಹಿತಾಸಕ್ತಿಯನ್ನು ಮನದಲ್ಲಿಟ್ಟುಕೊಂಡು ಗುಣಮಟ್ಟದ ಚರ್ಚೆಗಳನ್ನು ನಡೆಸಿ ವಿಧೇಯಕಗಳನ್ನು ಎಲ್ಲಾ ಆಯಾಮಗಳಲ್ಲಿ ಪರಾಮರ್ಶಿಸಿ ಸದನದ ಹಿರಿಮೆಯನ್ನು ಹೆಚ್ಚಿಸಲು ಸಹಕಾರ ನೀಡಿರುವ

ಸನ್ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಭಾನಾಯಕರು, ಸಚಿವರುಗಳು, ವಿರೋಧ ಪಕ್ಷದ ನಾಯಕರು, ಸರ್ಕಾರಿ ಮುಖ್ಯ ಸಚೇತಕರು, ವಿರೋಧ ಪಕ್ಷದ ಮುಖ್ಯ ಸಚೇತಕರು, ಶಾಸಕರುಗಳು ಮತ್ತು ಸಿಬ್ಬಂದಿ ವರ್ಗದವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಮ್ಮ ಅವಧಿಯಲ್ಲಿ ಈ ರೀತಿಯ ಗುಣಮಟ್ಟದ ಚರ್ಚೆಗಳು ನಡೆಯುತ್ತಿರುವುದು ಸಂತೋಷದಾಯಕವಾಗಿದ್ದು, ದೇಶದಲ್ಲಿಯೇ ವಿಧಾನ ಪರಿಷತ್ತನ್ನು ಒಂದು ಮಾದರಿ ಸದನವನ್ನಾಗಿ ರೂಪಿಸುವುದಕ್ಕೆ ತಮ್ಮೆಲ್ಲರ ಸಹಕಾರ ಸದಾಕಾಲ ಹೀಗೆಯೇ ಮುಂದುವರೆಯಬೇಕೆಂದು ನನ್ನ ಅಭಿಲಾಷೆ. ತಮ್ಮೆಲ್ಲರಿಗೆ ಮತ್ತೊಮ್ಮೆ ನನ್ನ ವಂದನೆಗಳು.

## 07. ಶಾಸನ ರಚನೆ

ಪ್ರಸಕ್ತ ಅಧಿವೇಶನದಲ್ಲಿ ಮಂಡಿಸಿ ಅಂಗೀಕರಿಸಲಾದ ವಿಧೇಯಕಗಳ ಪಟ್ಟಿಯನ್ನು **ವಿವರಣಾ ಪಟ್ಟಿ–5**ರಲ್ಲಿ ವಿವರಿಸಿದೆ.

## 08. ವಿಶೇಷ ಸದನ ಸಮಿತಿಯ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವ

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಅಧ್ಯಕ್ಷರು, ವಿಶೇಷ ಸದನ ಸಮಿತಿ) ಅವರು:–**

ದಿನಾಂಕ:19.08.2025ರಂದು ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ವರದಿಯನ್ನು ಸಲ್ಲಿಸಲು ದಿನಾಂಕ:22.04.2025ರಿಂದ 06 ತಿಂಗಳುಗಳ ಕಾಲಾವಕಾಶವನ್ನು ವಿಸ್ತರಿಸುವ ಪ್ರಸ್ತಾವನೆಗೆ ಸದನದ ಸಹಮತಿ ಕೋರಿ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

## 09. ನಿಲುವಳಿ ಸೂಚನೆ

ಪ್ರಸಕ್ತ ಅಧಿವೇಶನದಲ್ಲಿ ನಿಯಮ 59ರ ಅಡಿಯಲ್ಲಿ ಪ್ರಸ್ತಾಪಿಸಲಾದ ಸೂಚನೆಗಳನ್ನು **ವಿವರಣಾ ಪಟ್ಟಿ–6**ರಲ್ಲಿ ವಿವರಿಸಿದೆ.

## 10. ಚುನಾವಣಾ ಪ್ರಸ್ತಾವಗಳು

1. ದಿನಾಂಕ:13.08.2025ರಂದು 2025–26ನೇ ಸಾಲಿನ ವಿಧಾನ ಮಂಡಲದ ಜಂಟಿ ಸಮಿತಿಗಳು ಹಾಗೂ ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸಬೇಕೆಂಬ ಪ್ರಸಾವವನ್ನು ಮಾನ್ಯ ಸಭಾನಾಯಕರು ಹಾಗೂ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಪ್ರಸ್ತಾವ ಮಂಡಿಸಿದರು.

2. ದಿನಾಂಕ:21.08.2025ರಂದು 2025–26ನೇ ಸಾಲಿನ ವಿಧಾನಮಂಡಲದ ಜಂಟಿ ಸಮಿತಿಗಳಿಗೆ ಹಾಗೂ ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳಿಗೆ ವಿಧಾನ ಪರಿಷತ್ತಿನ ಸದಸ್ಯರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಮಾನ್ಯ ಸಭಾನಾಯಕರು ಪ್ರಸ್ತಾವವನ್ನು ಮಂಡಿಸಿದರು.

## 11. ಅಭಿನಂದನಾ ನಿರ್ಣಯ

ಶ್ರೀ ಬಸವರಾಜ ಹೊರಟ್ಟಿ, ಮಾನ್ಯ ಸಭಾಪತಿಯವರು ಸತತವಾಗಿ 45 ವರ್ಷಗಳು ಶಾಸಕರಾಗಿ ರಾಜಕೀಯ ಕ್ಷೇತ್ರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನಮಾನಸದಲ್ಲಿ ಅಚ್ಚಳಿಯದೆ ಛಾಪು ಮೂಡಿಸಿರುವ ಈ ಸುಸಂದರ್ಭದಲ್ಲಿ ಶ್ರೀ ಮಂಜುನಾಥ್ ಭಂಡಾರಿ ಅವರು ಮಂಡಿಸಿದ ಅಭಿನಂದನಾ ನಿರ್ಣಯವನ್ನು ಶ್ರೀ ಬಿ.ಕೆ. ಹರಿಪ್ರಸಾದ್ ಅನುಮೋದಿಸಿ, ಸರ್ಕಾರ ಹಾಗೂ ಸದನದ ಪರವಾಗಿ ಹೃತ್ಪೂರ್ವಕ ಅಭಿನಂದನೆಯನ್ನು ಸಲ್ಲಿಸಿದರು.

## 12. ವರದಿಗಳನ್ನೊಪ್ಪಿಸುವುದು

**ಪ್ರಸಕ್ತ ಅಧಿವೇಶನದಲ್ಲಿ ಈ ಕೆಳಕಂಡ ವರದಿಗಳನ್ನೊಪ್ಪಿಸಲಾಯಿತು.**

| ಕ್ರ. ಸಂ. | ಸಮಿತಿಯ ಹೆಸರು | ಸಲ್ಲಿಸಿದ ದಿನಾಂಕ | ವರದಿ ಸಂಖ್ಯೆ |
|---|---|---|---|
| 1. | ಹಕ್ಕುಬಾಧ್ಯತಾ ಸಮಿತಿ | 18.08.2025 | 104ನೇ ವರದಿ |
| 2. | ಸರ್ಕಾರಿ ಭರವಸೆಗಳ ಸಮಿತಿ | 19.08.2025 | 50ನೇ ವರದಿ |
| 3. | ಕರ್ನಾಟಕ ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸಮಿತಿ | 19.08.2025 | 43ನೇ ವರದಿ |
| 4. | ಕರ್ನಾಟಕ ವಿಧಾನಮಂಡಲದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ | 19.08.2025 | 40ನೇ ವರದಿ |
| 5. | ಕರ್ನಾಟಕ ವಿಧಾನಮಂಡಲದ ಅಧೀನ ಶಾಸನ ರಚನಾ ಸಮಿತಿ | 19.08.2025 | 53ನೇ ವರದಿ |
| 6. | ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ | 21.08.2025 | 5ನೇ ವರದಿ |
| 7. | ಗಂಗಾ ಕಲ್ಯಾಣ ಯೋಜನಾ ವಿಶೇಷ ಸದನ ಸಮಿತಿ | 22.08.2025 | ಅಂತಿಮ ವರದಿ |
| 8. | ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ | 22.08.2025 | 2ನೇ ವರದಿ |

## 13. ಧರಣಿ

ದಿನಾಂಕ:20.08.2025ರಂದು ಮಾನ್ಯ ಶಾಸಕರಾದ ಶ್ರೀ ನಸೀರ್ ಅಹ್ಮದ್ ಅವರು ಪ್ರಧಾನ ಮಂತ್ರಿಯ ಬಗ್ಗೆ ಆಡಿದ ಮಾತಿನ ಬಗ್ಗೆ ಕ್ಷಮಾಪಣೆ ಕೋರಬೇಕೆಂದು ಮಾನ್ಯ ವಿರೋಧ ಪಕ್ಷದ ಶಾಸಕರುಗಳು ಸದನದ ಭಾವಿಯಲ್ಲಿ ಧರಣಿ ನಿರತರಾದರು.

## 14. ಸಭಾತ್ಯಾಗ

1. ದಿನಾಂಕ:20.08.2025ರಂದು ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2025ನೇ ಸಾಲಿನ **"ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ"**ವನ್ನು ವಿರೋಧಿಸಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಶಾಸಕರುಗಳು ಸಭಾತ್ಯಾಗ ಮಾಡಿದರು.

## 15. ಗಮನ ಸೆಳೆಯುವ ಸೂಚನೆಗಳು

ಪ್ರಸಕ್ತ ಅಧಿವೇಶನದಲ್ಲಿ ನಿಯಮ 72ರಡಿಯಲ್ಲಿ ಚರ್ಚಿಸಿದ ಸೂಚನೆಗಳನ್ನು **ವಿವರಣಾ ಪಟ್ಟಿ–7**ರಲ್ಲಿ ತಿಳಿಸಿದೆ.

## 16. ನಿಯಮ 330ರ ಮೇರೆಗೆ

ಪ್ರಸಕ್ತ ಅಧಿವೇಶನದಲ್ಲಿ ನಿಯಮ 330ರಡಿಯಲ್ಲಿ ಚರ್ಚಿಸಿದ ಸೂಚನೆಗಳನ್ನು **ವಿವರಣಾ ಪಟ್ಟಿ–8**ರಲ್ಲಿ ತಿಳಿಸಿದೆ.

## 17. ವಿತ್ತೀಯ ಕಾರ್ಯಕಲಾಪ

ದಿನಾಂಕ:21.08.2025ರಂದು 2024–25ನೇ ಸಾಲಿನ ಪೂರಕ ಅಂದಾಜುಗಳ ಮೊದಲನೇ ಕಂತನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ಸಭಾನಾಯಕರು ಮಂಡಿಸಿದರು.

## 18. ಸಚಿವರ ಹೇಳಿಕೆ

**ದಿನಾಂಕ:20.08.2025ರಂದು ಪರಿಶಿಷ್ಟ ಜಾತಿಗಳ ಒಳಮೀಸಲಾತಿ–ಸರ್ಕಾರದ ತೀರ್ಮಾನ ಕುರಿತು ಮುಖ್ಯಮಂತ್ರಿಗಳು ಹೇಳಿಕೆ ನೀಡಿದರು.**

1. ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸುವ ಕುರಿತಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ದಿನಾಂಕ:01.08.2024ರಂದು ಪಂಜಾಬ್ ರಾಜ್ಯ ಮತ್ತು ಇತರರು ವರ್ಸಸ್ ದೇವಿಂದರ್ ಸಿಂಗ್ ಪ್ರಕರಣದಲ್ಲಿ

> "The provision provides the State with the power to make "any" special provisions for the Schedules castes and the Scheduled Tribes. Thereby, it recognizes the wide power of the State to employ a range of means to secure substantive equality. This would include sub-classifiction

within the Scheduled Castes." ಎಂದು ತೀರ್ಪು ನೀಡಿದೆ. ಅಂದರೆ, ಪರಿಶಿಷ್ಟ ಜಾತಿಗಳ ಉಪವರ್ಗೀಕರಣ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಸಾಂವಿಧಾನಿಕವಾಗಿ ದತ್ತವಾಗಿದೆ ಎಂದು ಸ್ಪಷ್ಟವಾಗಿ ಹೇಳಿದೆ. ಸಂವಿಧಾನದ ಅನುಚ್ಛೇದ 14, 15 ಮತ್ತು 16ರಲ್ಲಿ ತಿಳಿಯಪಡಿಸಿರುವ ಸಮಾನತೆಯ ತತ್ವಕ್ಕೆ ಯಾವುದೇ ಚ್ಯುತಿ ಬಾರದಂತೆ ಅದರ ಮೂಲ ಆಶಯವನ್ನು ಸದೃಢಗೊಳಿಸುವ ದೃಷ್ಟಿಯಿಂದ ಒಳ ಮೀಸಲಾತಿ ವ್ಯವಸ್ಥೆ ಕಲ್ಪಿಸಬಹುದು ಎಂದು ಅಭಿಪ್ರಾಯಪಟ್ಟಿದೆ.

2. ಈ ಹಿನ್ನೆಲೆಯಲ್ಲಿ, ನಮ್ಮ ಸರ್ಕಾರವು ದಿನಾಂಕ:12.11.2024ರಂದು ಆದೇಶ ಸಂಖ್ಯೆ ಎಸ್‌ಡಬ್ಲ್ಯುಡಿ/8/ಎಸ್‌ಎಲ್‌ಪಿ/2024(ಪಿ–1)ರ ಆದೇಶದ ಪ್ರಕಾರ ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್‌ದಾಸ್ ಅವರ ಏಕ ಸದಸ್ಯ ಆಯೋಗವನ್ನು ರಚಿಸಲಾಯಿತು. ಸದರಿ ಆಯೋಗವು ಸೂಕ್ತ ದತ್ತಾಂಶಗಳನ್ನು (Empirical Data) ಸಂಗ್ರಹಿಸಿ, ಒಳ ಮೀಸಲಾತಿ ನೀಡುವ ಕುರಿತು ಶಿಫಾರಸ್ಸುಗಳನ್ನು ಮಾಡಲು ಕೋರಲಾಯಿತು.

3. ಜಸ್ಟೀಸ್ ಹೆಚ್.ಎನ್. ನಾಗಮೋಹನ್‌ದಾಸ್ ಅವರ ಆಯೋಗವು ರಾಜ್ಯದ 101 ಪರಿಶಿಷ್ಟ ಜಾತಿಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ದಿನಾಂಕ:01.08.2025ರಂದು ವರದಿಯನ್ನು ಸಲ್ಲಿಸಿತು. ಆಯೋಗವು ಪರಿಶಿಷ್ಟ ಜಾತಿಗಳಿಗೆ ಸೇರಿದ 1,05,09,871 ಜನರ ದತ್ತಾಂಶಗಳನ್ನು ಸಂಗ್ರಹಿಸಿದೆ. ಶೇ.93ರಷ್ಟು ಪರಿಶಿಷ್ಟ ಜಾತಿಗಳ ಜನಸಂಖ್ಯೆಯು ಈ ಸಮೀಕ್ಷೆಗೆ ಲಭ್ಯವಾಗಿದೆ. ಸಚಿವರ ಸಂಪುಟವು ಈ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದೆ.

4. **ದಿನಾಂಕ:19.08.2025ರಂದು ನಡೆದ ಸಚಿವ ಸಂಪುಟದಲ್ಲಿ ಜಸ್ಟೀಸ್ ನಾಗಮೋಹನ್ ದಾಸ್ ಅವರ ಶಿಫಾರಸ್ಸುಗಳನ್ನು ಕೆಲವು ಮಾರ್ಪಾಟುಗಳೊಂದಿಗೆ ಅಂಗೀಕರಿಸಿದ್ದೇವೆ.**

   1) ಎಡಗೈ ಸಂಬಂಧಿತ ಜಾರಿಗಳೆಂದು ಆಯೋಗವು ಗುರ್ತಿಸಿರುವ ಸಮುದಾಯಗಳಿಗೆ ಶೇ.6ರಷ್ಟು ಒಳಮೀಸಲಾತಿ ಕಲ್ಪಿಸಲು ತೀರ್ಮಾನಿಸಿದ್ದೇವೆ.

   2) ಜಸ್ಟೀಸ್ ನಾಗಮೋಹನ್ ದಾಸ್ ಆಯೋಗವು ಪರಯ, ಮೊಗೇರ ಮುಂತಾದ ಬಲಗೈ ಸಂಬಂಧಿತ ಜಾತಿಗಳನ್ನು ಎಡಗೈ ಸಂಬಂಧಿತ ಜಾತಿಗಳ ಜೊತೆ ಸೇರಿಸಲಾಗಿದೆ ಎಂಬುದನ್ನು ಗಮನಿಸಿದ ಸಚಿವ ಸಂಪುಟವು ಈ ಜಾತಿಗಳನ್ನು ಬಲಗೈ ಸಂಬಂಧಿತ ಜಾತಿಗಳ ಜೊತೆ ಸೇರಿಸಿ ಬಲಗೈ ಸಂಬಂಧಿತ ಜಾತಿಗಳ ಸಮೂಹಕ್ಕೆ ಶೇ.6ರಷ್ಟು ಮೀಸಲಾತಿ ಕಲ್ಪಿಸಲು ತೀರ್ಮಾನಿಸಿದ್ದೇವೆ.

   3) ಇದರ ಜೊತೆಯಲ್ಲಿ ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಗುಂಪುಗಳಲ್ಲಿನ 4,74,954 ಜನಸಂಖ್ಯೆಯನ್ನು ಎಡಗೈ ಸಂಬಂಧಿತ ಮತ್ತು ಬಲಗೈ ಸಂಬಂಧಿತ ಜಾತಿಗಳ ಜೊತೆ ಸಮಾನವಾಗಿ ಹಂಚಿಕೆ ಮಾಡಲು ತೀರ್ಮಾನಿಸಿದ್ದೇವೆ.

   4) ಸ್ಪೃಶ್ಯ ಜಾತಿಗಳ ಗುಂಪಿಗೆ ಜಸ್ಟೀಸ್ ನಾಗಮೋಹನ್ ದಾಸ್ ಅವರು ಶೇ.4ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿದ್ದರು. ಹಾಗೆಯೇ 59 ಜಾತಿಗಳ 5,22,099 ಜನಸಂಖ್ಯೆಯನ್ನು ಪ್ರವರ್ಗ–ಎ ಎಂದು ತೀರ್ಮಾನಿಸಿ ಶೇ.1ರಷ್ಟು ಮೀಸಲಾತಿಯನ್ನು ಶಿಫಾರಸ್ಸು ಮಾಡಿದ್ದರು. ಕೆಲವು ತಾಂತ್ರಿಕ ಕಾರಣಗಳಿಂದ ಈ ಎರಡೂ ಗುಂಪುಗಳನ್ನು ಒಟ್ಟಿಗೆ ಸೇರಿಸಿ ಶೇ.5ರಷ್ಟು ಮೀಸಲಾತಿ ನೀಡಲು ತೀರ್ಮಾನಿಸಿದ್ದೇವೆ.

5) ಜಸ್ಟೀಸ್ ನಾಗಮೋಹನ್ ದಾಸ್ ಆಯೋಗವು ಎ,ಬಿ,ಸಿ,ಡಿ,ಇ ಎಂದು ಪ್ರವರ್ಗಗಳನ್ನಾಗಿ ವಿಭಾಗೀಕರಿಸಿ ಮಾಡಿದ್ದ ಶಿಫಾರಸ್ಸನ್ನು ಸಚಿವ ಸಂಪುಟವು ಎ,ಬಿ,ಸಿ ಎಂದು ಮೂರು ಪ್ರವರ್ಗಗಳನ್ನಾಗಿ ವಿಭಾಗೀಕರಿಸಲು ಹಾಗೂ ಎಡಗೈ ಸಂಬಂಧಿತ ಜಾತಿಗಳುಳ್ಳ ಎ ಪ್ರವರ್ಗಕ್ಕೆ – ಶೇ.6, ಬಲಗೈ ಸಂಬಂಧಿತ ಜಾರಿಗಳುಳ್ಳ ಬಿ ಪ್ರವರ್ಗಕ್ಕೆ – ಶೇ.6 ಹಾಗೂ ಸಿ ಪ್ರವರ್ಗಕ್ಕೆ – ಶೇ.5ರಷ್ಟು ಒಳಮೀಸಲಾತಿ ನೀಡಲು ತೀರ್ಮಾನಿಸಿದ್ದೇವೆ. ಪರಿಶಿಷ್ಟ ಜಾತಿಗಳಲ್ಲಿರುವ ಎಲ್ಲಾ 101 ಜಾತಿಗಳಿಗೆ ಶಿಕ್ಷಣ, ಉದ್ಯೋಗಾವಕಾಶ ಹಾಗೂ ಇನ್ನಿತರೆ ವಿಷಯಗಳಲ್ಲಿ ಅವಕಾಶಗಳನ್ನು ಒದಗಿಸುವಲ್ಲಿ ಸಮಾನತೆ ಮತ್ತು ನ್ಯಾಯ ಸಮ್ಮತತೆಯನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಈ ಮಾರ್ಪಾಡುಗಳನ್ನು ಮಾಡಲಾಗಿದೆ. ಈ ರೀತಿ ನಿರ್ಧಾರ ಮಾಡುವಾಗ ಸಚಿವ ಸಂಪುಟವು ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಲ್ಲಿ ನಮೂದಿಸಲಾದ ತತ್ವಗಳನ್ನು ಗಮನದಲ್ಲಿಟ್ಟುಕೊಂಡಿದೆ.

6) ಪರಿಶಿಷ್ಟ ಜಾತಿಗಳಲ್ಲಿನ ಚಲನಶೀಲತೆಯನ್ನು ಹಾಗೂ ಲಭ್ಯವಾಗುವ ದತ್ತಾಂಶಗಳನ್ನು ಪರಿಶೀಲಿಸಿಕೊಂಡು, ಕಾಲಕಾಲಕ್ಕೆ ಈ ಜಾತಿಗಳನ್ನು ಅಧ್ಯಯನ ಮಾಡಿ ವರದಿ ನೀಡಲು ಶಾಶ್ವತ ಪರಿಶಿಷ್ಟ ಜಾತಿಗಳ ಆಯೋಗವನ್ನು ರಚಿಸಲು ತೀರ್ಮಾನಿಸಿದ್ದೇವೆ.

7) ಒಳ ಮೀಸಲಾತಿಯ ಕುರಿತಂತೆ ಆದೇಶ ಹೊರಡಿಸಿದ ಕೂಡಲೇ ನೇಮಕಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಹಾಗೂ ಒಂದು ಬಾರಿಗೆ ವಯೋಮಿತಿ ಸಡಿಲಿಸಲು ತೀರ್ಮಾನಿಸಿದ್ದೇವೆ.

8) ಇದೇ ಸಂದರ್ಭದಲ್ಲಿ ಒಳ ಮೀಸಲಾತಿ ಹೋರಾಟಗಾರರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಲು ತೀರ್ಮಾನಿಸಿದ್ದೇವೆ.

9) ಸರ್ಕಾರವು ಈಗ ಕೈಗೊಂಡಿರುವ ತೀರ್ಮಾನದಲ್ಲಿ ಯಾವುದಾದರೂ ಮಾರ್ಪಾಡುಗಳ ಅಗತ್ಯತೆ ಕಂಡುಬಂದರೆ ಅವುಗಳನ್ನು ಮುಂದಿನ ರಾಷ್ಟ್ರೀಯ ಜನಗಣತಿಯಲ್ಲಿನ ಅಂಕಿ–ಅಂಶಗಳನ್ನು ಆಧರಿಸಿ ಬದಲಾವಣೆಗೆ ಒಳಪಡಿಸುವ ಷರತ್ತಿಗೆ ಬದ್ಧವಾಗಿದೆ. ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ವರದಿಯನ್ನು ಮೇಲೆ ಪ್ರಸ್ತಾಪಿಸಿದ ಮಾರ್ಪಾಟುಗಳೊಂದಿಗೆ ಅಂಗೀಕರಿಸಿದೆ ಎಂಬ ಅಂಶಗಳನ್ನು ಸದನದ ಮುಂದೆ ಮಂಡಿಸಲು ಸರ್ಕಾರವು ಸಂತೋಷ ಪಡುತ್ತದೆ. ನಮ್ಮ ಈ ತೀರ್ಮಾನವು ಒಳ ಮೀಸಲಾತಿ ಕುರಿತ ದಶಕಗಳ ಹೋರಾಟಕ್ಕೆ ನ್ಯಾಯ ಕಲ್ಪಿಸುವಲ್ಲಿ ಯಶಸ್ವಿಯಾಗಿದೆ ಎಂದು ಭಾವಿಸಿದ್ದೇವೆ. ಅಭಿವೃದ್ಧಿಶೀಲ ರಾಜ್ಯವಾದ ಕರ್ನಾಟಕವು ಸಾಮಾಜಿಕ ನ್ಯಾಯದ ವಿಚಾರದಲ್ಲೂ ಮುಂಚೂಣಿಯಲ್ಲಿದೆ ಎಂಬುದನ್ನು ನಮ್ಮ ಸರ್ಕಾರವು ಸಾಬೀತು ಮಾಡಿದೆ.

## 19. ಅಧಿಕೃತ ನಿರ್ಣಯಗಳು

ಅ. **ದಿನಾಂಕ:21.08.2025ರಂದು ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು) ಅವರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.**

"ಸುಸ್ಥಿರ ಶಾಂತಿಯು ಅಂತರರಾಷ್ಟ್ರೀಯ ಸಮುದಾಯದ ಜವಾಬ್ದಾರಿ ಮಾತ್ರವಲ್ಲದೆ, ಸ್ಥಳೀಯ ಸಮುದಾಯಗಳು ಮತ್ತು ಪಾಲುದಾರರು ಸಾಮೂಹಿಕವಾಗಿ ನಿರ್ಮಿಸಬೇಕಾದ ಹಂಚಿಕೆಯ ಬಾಧ್ಯತೆಯಾಗಿರುತ್ತದೆ. ದಿವ್ಯತೆಯ ಸಂಸ್ಕೃತಿ, ವಿಶ್ವ ಶಾಂತಿ, ಬೆಳಕಿನ ಮರುಸ್ಥಾಪನೆಯಿಂದ (HWPL) ಮಾರ್ಚ್ 14, 2016ರಂದು ಉದ್ಘೋಷಿಸಲಾದ ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯು (DPCW), ಸಂಘರ್ಷ ತಡೆಗಟ್ಟುವಿಕೆ ಮತ್ತು ಪರಿಹಾರ, ನಿಶ್ಯಸ್ತ್ರೀಕರಣ ಮತ್ತು ಶಾಂತ ಸಂಸ್ಕೃತಿಯ

ಪ್ರಸರಣಕ್ಕಾಗಿ ನಿರ್ದಿಷ್ಟ ಉಪಬಂಧಗಳನ್ನು ಒಳಗೊಂಡ ಅಂತರರಾಷ್ಟ್ರೀಯ ಸಮಗ್ರ ಕಾನೂನಾತ್ಮಕ ಚೌಕಟ್ಟಾಗಿ ಕಾರ್ಯನಿರ್ವಹಿಸುತ್ತಿದೆ.

ಶಾಂತಿ ಮತ್ತು ಯುದ್ದ ನಿಲುಗಡೆ ಘೋಷಣೆಯು (DPCW), ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಮಾನದಂಡಗಳು ಮತ್ತು ವಿಶ್ವಸಂಸ್ಥೆ ಸನ್ನದಿನ ತತ್ವಗಳನ್ನು ಆಧರಿಸಿದೆ ಮತ್ತು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭವಿಷ್ಯದ ಒಪ್ಪಂದಗಳು ಅಥವಾ ನಿರ್ಣಯಗಳಿಗೆ ಕಾರ್ಯಸಾಧ್ಯವಾಗಬಲ್ಲ ಕರಡು ಘೋಷಣೆಯಾಗಿ ಕಾರ್ಯನಿರ್ವಹಿಸುತ್ತಿದೆ.

ಶಾಂತಿ ತತ್ವಗಳ ಅನುಷ್ಠಾನವನ್ನು ಸ್ವಯಂಪ್ರೇರಣೆಯಿಂದ ತಳಮಟ್ಟದಲ್ಲಿಯೇ ಮುನ್ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಯುವ ಸಂಘಟನೆಗಳು ಮತ್ತು ಧಾರ್ಮಿಕ ಸಮುದಾಯಗಳನ್ನು ಒಳಗೊಂಡಂತೆ ಬೆಳೆಯುತ್ತಿರುವ ಭಾರತೀಯ ನಾಗರಿಕ ಸಮಾಜದ ಪಾತ್ರವು ಸ್ಮರಣೀಯವಾಗಿದೆ.

ದಿವ್ಯತೆಯ ಸಂಸ್ಕೃತಿ, ವಿಶ್ವಶಾಂತಿ, ಬೆಳಕಿನ ಮರುಸ್ಥಾಪನೆಯ (HWPL) ಶಾಂತಿ ಉಪಕ್ರಮಗಳಾದ ಯುವ ನಾಯಕತ್ವ ಅಭಿವೃದ್ಧಿ, ಪ್ರತಿಬಂಧಕ ಶಾಂತಿ ಶಿಕ್ಷಣ ಮತ್ತು ನಾಗರಿಕ ಮುಂದಾಳತ್ವದ ಪರಿಸರ ಅಭಿಯಾನಗಳು ಪ್ರತಿನಿಧಿಸುವ ಸ್ವಯಂಪ್ರೇರಿತ ಪಾಲ್ಗೊಳ್ಳುವಿಕೆ ಮತ್ತು ಸಾರ್ವಜನಿಕ ಹಿತದ ಆಧಾರದ ಮೇಲಿನ ಸಮುದಾಯ ಕೇಂದ್ರಿತ ಶಾಂತಿ ಮಾದರಿಯನ್ನು ಪರಿಗಣಿಸಬೇಕಾಗಿದೆ.

ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯು (DPCW) ನಮ್ಮ ಕಾಲಘಟ್ಟದ ಶಾಂತಿಯುತ ಸಹಬಾಳ್ವೆಗಾಗಿನ ಘೋಷಣೆ ಮಾತ್ರವಲ್ಲದೆ, ಭವಿಷ್ಯದ ಪೀಳಿಗೆಗಾಗಿ ದೀರ್ಘಾವಧಿಯ ಕಾನೂನಾತ್ಮಕ ಮಾನದಂಡ ಮತ್ತು ಸಾಂಸ್ಥಿಕ ನೀಲನಕ್ಷೆಯಾಗಿ, ಶಾಂತಿಯನ್ನು ಶಾಶ್ವತ ಪರಂಪರೆಯಾಗಿ ಸಮರ್ಪಿಸುವುದನ್ನು ದೃಢೀಕರಿಸಬೇಕಾಗಿದೆ.

**ಆದ್ದರಿಂದ, ಈ ಸದನವು ಸರ್ವಾನುಮತದಿಂದ ಈ ಮೂಲಕ ಕೆಳಗಿನಂತೆ ನಿರ್ಣಯಿಸುತ್ತದೆ:–**

1) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿ (DPCW) ಪ್ರತಿಪಾದಿಸಲಾದ ತತ್ವಗಳು ಮತ್ತು ಲೇಖನಗಳಿಗೆ ಸಂಪೂರ್ಣ ಬೆಂಬಲವನ್ನು ಘೋಷಿಸುತ್ತದೆ.

2) ಶಾಂತಿ ಶಿಕ್ಷಣ, ಸಮುದಾಯ ಆಧಾರಿತ ಪರಿಸರ ಉಪಕ್ರಮಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಜಾಗೃತಿ ಅಭಿಯಾನಗಳನ್ನು ಒಳಗೊಂಡ ಕಾರ್ಯಕ್ರಮಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸಲು ಮತ್ತು ಕಾರ್ಯಗತಗೊಳಿಸಲು ದಿವ್ಯತೆಯ ಸಂಸ್ಕೃತಿ, ವಿಶ್ವಶಾಂತಿ, ಬೆಳಕಿನ ಮರುಸ್ಥಾಪನೆಯೊಂದಿಗೆ (HWPL) ಸಹಭಾಗಿ ಹಂದರವನ್ನು (framework) ಸ್ಥಾಪಿಸಲು ಬದ್ಧವಾಗಿರುತ್ತದೆ.

3) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿನ (DPCW) ಶಾಸನಾತ್ಮಕ ಚರ್ಚೆಗಳನ್ನು ಮತ್ತು ವ್ಯಾಪಕ ಪ್ರಸರಣವನ್ನು ಉತ್ತೇಜಿಸುವುದಕ್ಕಾಗಿ, ಈ ನಿರ್ಣಯವನ್ನು ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯ ಸರ್ಕಾರಗಳೊಂದಿಗೆ ಹಂಚಿಕೊಳ್ಳಲು ಶಿಫಾರಸ್ಸು ಮಾಡುತ್ತದೆ.

4) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯ (DPCW) ಆಧಾರದ ಮೇಲೆ “ಸುಸ್ಥಿರ ಶಾಂತಿ ಗ್ರಾಮಗಳು” ಅಥವಾ “ಶಾಂತಿ ನಗರಗಳು” ಎಂಬ ಪದನಾಮದ ಪ್ರಾಯೋಗಿಕ ಅನುಷ್ಠಾನವನ್ನು ಬೆಂಬಲಿಸುತ್ತದೆ ಮತ್ತು ಈ ಪ್ರಯತ್ನಗಳನ್ನು ವಿಸ್ತರಿಸುವುದಕ್ಕಾಗಿ ಅಂತರ–ನಗರ ಸಹಕಾರವನ್ನು ಪ್ರೋತ್ಸಾಹಿಸುತ್ತದೆ.

5) ಶಾಂತಿ ಮತ್ತು ಯುದ್ಧ ನಿಲುಗಡೆ ಘೋಷಣೆಯಲ್ಲಿನ (DPCW) ಅನುಚ್ಛೇದ 10ರಲ್ಲಿ ವಿವರಿಸಿರುವ ತತ್ವಗಳನ್ನು ಒಳಗೊಂಡಂತೆ ನಾಗರಿಕ ಪಾಲ್ಗೊಳ್ಳುವಿಕೆ, ಶಾಂತಿ ಶಿಕ್ಷಣ ಮತ್ತು ಸಾಂಸ್ಕೃತಿಕ ಪ್ರಸರಣವನ್ನು ಸ್ಥಳೀಯ ಸರ್ಕಾರದ ಶಾಂತಿ ನೀತಿಗಳು ಮತ್ತು ಯೋಜನಾ ಚೌಕಟ್ಟುಗಳಲ್ಲಿ ಸಂಯೋಜಿಸಲಾಗುತ್ತಿದೆ ಎಂಬುದನ್ನು ಖಾತ್ರಿಪಡಿಸುತ್ತದೆ.

ಈ ನಿರ್ಣಯವು ರಾಷ್ಟ್ರೀಯ ಮಟ್ಟದಲ್ಲಿ ವೈಯಕ್ತಿಕ ನಿರ್ಣಯಗಳ ಸಂಭಾವ್ಯ ಸಲ್ಲಿಕೆಯನ್ನು ಬೆಂಬಲಿಸಲು ಒಂದು ಮೂಲಭೂತ ದಸ್ತಾವೇಜಿನಂತೆ ಕಾರ್ಯನಿರ್ವಹಿಸುತ್ತದೆ ಹಾಗೂ ಇದನ್ನು ದಾಖಲಿಸುವುದಕ್ಕಾಗಿ ಮತ್ತು ಹೆಚ್ಚಿನ ತೊಡಗಿಸಿಕೊಳ್ಳುವಿಕೆಗಾಗಿ ಸಂಬಂಧಪಟ್ಟ ಮಂತ್ರಾಲಯಗಳು ಮತ್ತು ವಿಶ್ವಸಂಸ್ಥೆಯ ಮಾಹಿತಿ ಕೇಂದ್ರಕ್ಕೆ ಕಳುಹಿಸಲಾಗುವುದೆಂದು ಈ ಮೂಲಕ ಘೋಷಿಸುತ್ತದೆ.”

ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

ಆ. **ದಿನಾಂಕ:21.08.2025ರಂದು ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಅವರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.**

“ಭಾರತ ಸಂವಿಧಾನದ 252ನೇ ಅನುಚ್ಛೇದದ ಖಂಡ(1)ರಡಿ ಮತ್ತು ಸದರಿ ಅಧಿನಿಯಮದಲ್ಲಿನ 1ನೇ ಪ್ರಕರಣದ (3)ನೇ ಉಪ ಪ್ರಕರಣದಡಿಯಲ್ಲಿ ಅಗತ್ಯಪಡಿಸಿದಂತೆ, ಮಾನವ ಅಂಗಾಂಗ ಕಸಿ (ತಿದ್ದುಪಡಿ) ಅಧಿನಿಯಮ, 2011 (2011ರ ಕೇಂದ್ರ ಅಧಿನಿಯಮ 16) ಅನ್ನು ಕರ್ನಾಟಕ ರಾಜ್ಯದಲ್ಲಿ ಅಳವಡಿಸಿಕೊಳ್ಳಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.”

ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

## 20. ಅಧಿವೇಶನ ಮುಂದೂಡಿಕೆ

ವಿಧಾನ ಪರಿಷತ್ತಿನ 156ನೇ ಅಧಿವೇಶನದ ಉಪವೇಶನವು ದಿನಾಂಕ:11.08.2025ರಿಂದ ದಿನಾಂಕ:22.08.2025ರವರೆಗೆ ನಡೆದಿದ್ದು, ಸದರಿ ಅಧಿವೇಶನವನ್ನು ರಾಷ್ಟ್ರಗೀತೆಯೊಂದಿಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ.**

# ವಿವರಣಾ ಪಟ್ಟಿ–1

## 156ನೇ ಅಧಿವೇಶನ

## (ದಿನಾಂಕ:11.08.2025 ರಿಂದ 22.08.2025ರವರೆಗೆ)

| ಕ್ರ.ಸಂ. | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | ಒಟ್ಟು ಸಮಯ | ಕ್ರೋಡೀಕೃತ ಸಮಯ |
|---|---|---|---|---|---|
| 01 | 11.08.2025 | ಬೆ:11.08<br>ಮ:12.25<br>ಮ:04.05 | ಮ:12.10<br>ಮ:02.40<br>ಸಂ:05.53 | 05.05 | |
| 02 | 12.08.2025 | ಬೆ:11.05<br>ಬೆ:11.23<br>ಮ:03.25 | ಬೆ:11.08=03ನಿ<br>ಮ:01.50=2.27<br>ಸಂ:06.20=2.55 | 05.25 | **10.30** |
| 03 | 13.08.2025 | ಬೆ:11.20<br>ಮ:03.30 | ಮ:01.45=2.25ನಿ<br>ಸಂ:06.00=2.30 | 04.55 | **15.25** |
| 04 | 14.08.2025 | ಬೆ:10.10 | ಮ:02.50=4.40ನಿ | 04.40 | **20.05** |
| 05 | 18.08.2025 | ಬೆ:10.15<br>ಮ:04.10 | ಮ:02.40=4.25ನಿ<br>ಸಂ:06.24=2.14ನಿ | 06.39 | **26.44** |
| 06 | 19.08.2025 | ಬೆ:10.15<br>ಮ:03.30 | ಮ:02.00=3.45ನಿ<br>ಸಂ:06.45=03.15 | 07.00 | **33.44** |
| 07 | 20.08.2025 | ಬೆ:10.20<br>ಮ:03.40<br>ಸಂ:05.10 | ಮ:02.30=04.10ನಿ<br>ಸಂ:04.50=01.10<br>ರಾ:12.01=06.51ನಿ | 12.11 | **45.55** |
| 08 | 21.08.2025 | ಬೆ:10.30<br>ಮ:04.15 | ಮ:02.25=03.55ನಿ<br>ರಾ:07.00=02.45 | 06.40 | **52.35** |
| 09 | 22.08.2025 | ಬೆ:10.25 | ಮ:01.30 | 03.05 | **55.45** |
| **ಒಟ್ಟು ಸಮಯ** | | | | | **55.25** |

**ವಿವರಣಾ ಪಟ್ಟಿ–2**
**ನೂರ ಐವತ್ತಾರನೆಯ ಅಧಿವೇಶನ**
**ಕಾರ್ಯದರ್ಶಿಯವರ ವರದಿ**

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

| ಕ್ರಮ ಸಂಖ್ಯೆ | **ವಿಧೇಯಕಗಳ ಪಟ್ಟಿ** |
|---|---|
| **1.** | ಗದಗ–ಬೆಟಗೇರಿ ವ್ಯಾಪಾರ, ಸಂಸ್ಕೃತಿ ಮತ್ತು ವಸ್ತುಪ್ರದರ್ಶನ ಪ್ರಾಧಿಕಾರ ವಿಧೇಯಕ, 2024 (ವಿಧೇಯಕ ಸಂ.19)<br>**THE GADAG-BETAGERI, CULTURE AND EXHIBITION AUTHORITY BILL, 2024** |
| **2.** | **ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದುಪಡಿ) ವಿಧೇಯಕ, 2024 (ವಿ.ಸಂ.55)**<br>**THE CODE OF CIVIL PROCEDURE (KARNATAKA AMENDMENT) BILL, 2024** |
| **3.** | **ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 (ವಿ.ಸಂ.54)**<br>**THE MYSURU DEVELOPMENT AUTHORITY BILL, 2024** |
| **4.** | ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) ವಿಧೇಯಕ,2025 (ವಿಧೇಯಕ ಸಂ–5)<br>**THE BANGALORE PALACE (UTILIZATION AND REGULATION OF LAND) BILL, 2025** |
| **5.** | ಕರ್ನಾಟಕ ಗಿರವಿದಾರರ (ತಿದ್ದುಪಡಿ) ವಿಧೇಯಕ,2025 (ವಿಧೇಯಕ ಸಂ–2)<br>**THE KARNATAKA PAWN BROKERS (AMENDMENT) BILL, 2025** |
| **6.** | ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ–3)<br>**THE KARNATAKA PROHIBITION OF CHARGING EXORBITANT INTEREST (AMENDMENT) BILL, 2025** |
| **7.** | ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ–4)<br>**THE KARNATAKA MONEY LENDERS (AMENDMENT) BILL, 2025** |
| **8.** | ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ–1)<br>**THE KARNATAKA AGRICULTURAL PRODUCE MARKETING (REGULATION AND DEVELOPMENT) BILL, 2025** |
| **9.** | ಕರ್ನಾಟಕ ಕಿರು (Micro) ಸಾಲ ಮತ್ತು ಸಣ್ಣ ಸಾಲ (ಬಲವಂತದ ಕ್ರಮಗಳ ಪ್ರತಿಬಂಧಕ) ವಿಧೇಯಕ,2025 (ವಿಧೇಯಕ ಸಂ–6)<br>**THE KARNATAKA MICRO LOAN AND SMALL LOAN (PREVENTION OF COERCIVE ACTIONS) BILL, 2025** |
| **10.** | ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ, 2024 (ವಿಧೇಯಕ ಸಂ.34)<br>**THE GREATER BENGALURU GOVERNANCE BILL, 2024** |

| | |
|---|---|
| **11.** | ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.14)<br>**THE KARNATAKA VILLAGE OFFICES ABOLITION (AMENDMENT) BILL, 2025** |
| **12.** | ಕರ್ನಾಟಕ ಭೂ ಕಬಳಿಕೆ ನಿಷೇಧ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.15)<br>**THE KARNATAKA LAND GRABBING PROHIBITION (AMENDMENT) BILL, 2025** |
| **13.** | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.17)<br>**THE BRUHAT BENGALURU MAHANAGARA PALIKE (AMENDMENT) BILL, 2025** |
| **14.** | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.18)<br>**THE KARNATAKA GRAM SWARAJ AND PANCHAYAT RAJ (AMENDMENT) BILL, 2025** |
| **15.** | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.19)<br>**THE UNIVERSITIES OF AGRICULTURAL SCIENCES (AMENDMENT) BILL, 2025** |
| **16.** | ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.20)<br>**THE KARNATAKA MOTOR VEHICLES TAXATION (AMENDMENT) BILL, 2025** |
| **17.** | ಕರ್ನಾಟಕ ಪಶು ಆಹಾರ (ಉತ್ಪಾದನೆ ಮತ್ತು ಗುಣಮಟ್ಟ ನಿಯಂತ್ರಣದ ವಿನಿಯಮನ) ವಿಧೇಯಕ, 2025 (ವಿಧೇಯಕ ಸಂ.21)<br>**THE KARNATAKA ANIMAL FEED (REGULATION OF MANUFACTURE AND QUALITY CONTROL) BILL, 2025** |
| **18.** | ಕರ್ನಾಟಕ ಧನವಿನಿಯೋಗ (ಸಂ.2) ವಿಧೇಯಕ, 2025 (ವಿಧೇಯಕ ಸಂ.22)<br>**THE KARNATAKA APPROPRIATION (No.2) BILL, 2025** |
| **19.** | ಡಾ.ಎಚ್. ನರಸಿಂಹಯ್ಯ ವಿಜ್ಞಾನ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2025 (ವಿಧೇಯಕ ಸಂ.24)<br>**Dr. H. NARASIMAIAH SCIENCE, EDUCATIONAL, CULTURAL AND TOURISM DEVELOPMENT AUTHORITY BILL, 2025** |
| **20.** | ಕರ್ನಾಟಕ ವಿಧಾನಮಂಡಲದ ಸಂಬಳಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.25)<br>**THE KARNATAKA LEGISLATURE SALARIES, PENSIONS AND ALLOWANCES (AMENDMENT) BILL, 2025** |
| **21.** | ಕರ್ನಾಟಕ ಮಂತ್ರಿಗಳ ಸಂಬಳಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.26)<br>**THE KARNATAKA MINISTERS SALARIES AND ALLOWANCES (AMENDMENT) BILL, 2025** |

| | |
|---|---|
| **22.** | ಬೆಂಗಳೂರು ಅರಮನೆ (ಭೂ ಬಳಕೆ ಮತ್ತು ನಿಯಂತ್ರಣ) (ತಿದ್ದುಪಡಿ) ವಿಧೇಯಕ,2025 (ವಿಧೇಯಕ ಸಂ–27)<br>**THE BANGALORE PALACE (UTILIZATION AND REGULATION OF LAND) (AMENDMENT) BILL, 2025** |
| **23.** | ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.12)<br>**THE KARNATAKA STAMP (AMENDMENT) BILL, 2025** |
| **24.** | ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.11)<br>**THE KARNATAKA LAND REVENUE (AMENDMENT) BILL, 2025** |
| **25.** | ಕರ್ನಾಟಕ ವೃತ್ತಿಗಳ, ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.8)<br>**THE KARNATAKA TAX ON PROFESSION, TRADES, CALLINGS AND EMPLOYMENTS (AMENDMENT) BILL, 2025** |
| **26.** | ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.7)<br>**THE KARNATAKA STATE RURAL DEVELOPMENT AND PANCHAYAT RAJ UNIVERSITY (AMENDMENT) BILL, 2025** |
| **27.** | ಕರ್ನಾಟಕ ಧನವಿನಿಯೋಗ ವಿಧೇಯಕ, 2025 (ವಿಧೇಯಕ ಸಂ.10)<br>**THE KARNATAKA APPROPRIATION BILL, 2025** |
| **28.** | ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025 (ವಿಧೇಯಕ ಸಂ.13)<br>**THE REGISTRATION (KARNATAKA AMENDMENT) BILL, 2025** |

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

## ವಿವರಣಾ ಪಟ್ಟಿ-3

# ಕರ್ನಾಟಕ ವಿಧಾನ ಪರಿಷತ್ತು

### 156ನೇ ಅಧಿವೇಶನದಲ್ಲಿ ಚರ್ಚಿಸಲಾದ ಶೂನ್ಯ ವೇಳೆ ಪ್ರಸ್ತಾವಗಳಿಗೆ ಉತ್ತರ ಬಾರದಿರುವ ವಿವರ

(ದಿನಾಂಕ:11.08.2025 ರಿಂದ 22.08.2025 ರವರೆಗೆ)

| ಕ್ರ ಸಂ | ಸದಸ್ಯರ ಹೆಸರು ಶ್ರೀಮತಿ/ಶ್ರೀಯುತರುಗಳಾದ: | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಉತ್ತರ | ಷರಾ |
|---|---|---|---|---|---|
| 1. | ಡಿ.ಎಸ್. ಅರುಣ್ | 11.08.2025 | ರಾಜ್ಯದ ಧಾರ್ಮಿಕ ಹೆಮ್ಮೆ ಮತ್ತು ಸಾಂಸ್ಕೃತಿಕ ಕೇಂದ್ರವಾಗಿರುವ ಧರ್ಮಸ್ಥಳದ ವಿರುದ್ಧ ಅನಾಮಿಕ ವ್ಯಕ್ತಿಯೊಬ್ಬರೂ ಯಾವುದೇ ಸಾಕ್ಷ್ಯವಿಲ್ಲದೆ ಆರೋಪ ಮಾಡಿರುವ ಕುರಿತು | **ದಿ: 13.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರು ತಿಳಿಸಿದರು. |
| 2. | ಸಿ.ಎನ್. ಮಂಜೇಗೌಡ | 11.08.2025 | ರಾಜ್ಯದ ಆರು ಸಾವಿರ ಗ್ರಾಮ ಪಂಚಾಯತಿಗಳಿಗೆ, 187 ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವ ಸಂಬಂಧ ಮೀಸಲಾತಿ ಪಟ್ಟಿಯನ್ನು ಚುನಾವಣೆ ಆಯೋಗಕ್ಕೆ ರಾಜ್ಯ ಸರ್ಕಾರ ಈವರೆಗೂ ನೀಡದಿರುವ ಕುರಿತು | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 3. | ಪಿ.ಹೆಚ್. ಪೂಜಾರ್ ಮತ್ತು ಶಶೀಲ್ ಜಿ. ನಮೋಶಿ | 11.08.2025 | ರಾಜ್ಯದಲ್ಲಿ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ನಾಪತ್ತೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ವಿಶೇಷ ತಂಡಗಳನ್ನು ರಚಿಸಬೇಕೆಂದು ಹಾಗೂ ಭಾಗಿಯಾದವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಕುರಿತು | **ದಿ: 13.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 4. | ತಿಪ್ಪಣ್ಣಪ್ಪ ಕಮಕನೂರ | 11.08.2025 | ದಕ್ಷಿಣ ಭಾರತದಲ್ಲಿ ಮೊಟ್ಟಮೊದಲು ಪ್ರಾರಂಭವಾದ ಗುಲಬರ್ಗಾ ದೂರದರ್ಶನ ಕೇಂದ್ರವನ್ನು ಕೇಂದ್ರ ಸರ್ಕಾರ ರದ್ದು ಮಾಡುತ್ತಿರುವ ಕುರಿತು | **ದಿ: 13.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. |
| 5. | ನಿರಾಣಿ ಹಣಮಂತ್ ರುದ್ರಪ್ಪ | 11.08.2025 | ರಾಜ್ಯ ಸರ್ಕಾರವು ತಂತ್ರಜ್ಞಾನ ಆಧಾರಿತ ಸ್ಮಾರ್ಟ್ ಬೋರ್ಡ್, ಡಿಜಿಟಲ್ ಕ್ಲಾಸ್‌ಗಳಲ್ಲಿ ಬೋಧನೆ ಮಾಡುವ ಮೂಲಕ ಮಕ್ಕಳನ್ನು ಆಧುನಿಕ ಜಗತ್ತಿಗೆ ತಯಾರುಗೊಳಿಸಿ ಮಾನವ ಸಂಪನ್ಮೂಲವನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಹೊರಡಿಸಿರುವ ಎಲ್‌ಬಿಎ ಆದೇಶದಿಂದ ಶಿಕ್ಷಕರು ತೊಂದರೆಗೀಡಾಗಿದ್ದು, ಸದರಿ ಆದೇಶವನ್ನು ಹಿಂಪಡೆಯಬೇಕೆಂಬ ವಿಷಯದ ಕುರಿತು | **ದಿ: 13.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಸಹಕಾರ ಸಚಿವರು |

| | | | | | |
|---|---|---|---|---|---|
| 6. | ಎಂ. ನಾಗರಾಜು | 11.08.2025 | ಖಾನಾಪುರ ತಾಲ್ಲೂಕಿನ ನಂದಗಡ ಗ್ರಾಮದಲ್ಲಿರುವ ಟಿಎಪಿಎಂಸಿ (ಮಾರ್ಕೆಟಿಂಗ್) ಸೊಸೈಟಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸೂಕ್ತ ತನಿಖೆ ನಡೆಸಿ ಆರೋಪಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು ಕುರಿತು | **ದಿ: 13.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಸಹಕಾರ ಸಚಿವರು |
| 7. | ಐವನ್ ಡಿ'ಸೋಜಾ | 11.08.2025 | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಂಪು ಕಲ್ಲು ಹಾಗೂ ಮರಳುಗಾರಿಕೆ ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಕೂಲಿ ಕಾರ್ಮಿಕರು ಹಾಗೂ ಸಣ್ಣ ಗುತ್ತಿಗೆದಾರರು ತೊಂದರೆಯಲ್ಲಿದ್ದು, ಕರಾವಳಿ ಜಿಲ್ಲೆಗಳಿಗೆ ಹೊಸ ನೀತಿಯನ್ನು ಜಾರಿಗೊಳಿಸಿ ಪರವಾನಗೆ ನೀಡುವ ಕುರಿತು | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| 8. | ಗೋವಿಂದರಾಜು | 11.08.2025 | ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಗರ್ಭಿಣಿ, ಬಾಣಂತಿಯರು, ಕಿಶೋರಿಯರು ಹಾಗೂ 6 ವರ್ಷದೊಳಗಿನ ಮಕ್ಕಳಿಗೆ ಪೌಷ್ಠಿಕ ಆಹಾರ ವಿತರಿಸಲು ಫಲಾನುಭವಿಗಳಿಗೆ ಅಳವಡಿಸಿರುವ ಫೇಸ್ ಕ್ಯಾಪ್ಚರ್ ನೆಟವರ್ಕ್ ಅಭಾವದಿಂದಾಗಿ ಸರಿಯಾಗಿ ಕಾರ್ಯನಿರ್ವಹಿಸದಿರುವ ಸಂದರ್ಭದಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು |

| | | | | | |
|---|---|---|---|---|---|
| 9. | ಎಸ್.ವ್ಹಿ. ಸಂಕನೂರ | 11.08.2025 | ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರುಗಳ/ನೌಕರರ ಪಿಂಚಣಿ ಹಣವನ್ನು ಪ್ರತಿ ತಿಂಗಳು ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಉನ್ನತ ಶಿಕ್ಷಣ ಸಚಿವರು |
| 10. | ತಿಪ್ಪಣ್ಣಪ್ಪ ಕಮಕನೂರ | 12.08.2025 | ರಾಜ್ಯದಲ್ಲಿ ಕಳೆದ 30 ವರ್ಷಗಳಲ್ಲಿ 98 ಸಫಾಯಿ ಕರ್ಮಚಾರಿಗಳು ಶೌಚದ ಗುಂಡಿ ಹಾಗೂ ಒಳಚರಂಡಿಗಳಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಉಸಿರುಗಟ್ಟಿ ಸಾವನ್ನಪ್ಪಿರುವ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು ಉತ್ತರಿಸಿದರು. |
| 11. | ಸಿ.ಎನ್. ಮಂಜೇಗೌಡ | 12.08.2025 | ಮೈಸೂರಿನ ಚಾಮರಾಜೇಂದ್ರ ಮೃಗಾಲಯದ, ಕೃಷ್ಣರಾಜ ಸಾಗರ (ಕೆ.ಆರ್.ಎಸ್) ಬೃಂದಾವನ, ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮ ಪ್ರವೇಶ ದರ ಹಾಗೂ ಬೋಟಿಂಗ್‌ಗಳಿಗೆ ಹೆಚ್ಚಿಸಿರುವ ದರಗಳನ್ನು ಹಿಂಪಡೆಯುವ ಕುರಿತು | | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 12. | ಪಿ.ಹೆಚ್. ಪೂಜಾರ್ | 12.08.2025 | ಸಂಸ್ಕೃತ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್, ಮರಡಿಗುಡ್ಡೆಯ 100 ಎಕರೆಯಲ್ಲಿ ಕಟ್ಟಡ ನಿರ್ಮಾಣಗೊಂಡರೂ ಬಳಕೆಯಾಗದೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು, ಕೂಡಲೇ ಮೂಲಸೌಕರ್ಯಗಳನ್ನು ಕಲ್ಪಿಸಿ ವಿಶ್ವವಿದ್ಯಾಲಯದ ಕಟ್ಟಡ ಉದ್ಘಾಟಿಸುವ ಕುರಿತು | | ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 13. | ಡಾ: ಧನಂಜಯ ಸರ್ಜಿ | 12.08.2025 | ಕೇಂದ್ರ ಸರ್ಕಾರವು ದಿನಾಂಕ:25.06.2025ರಲ್ಲಿ ಹೊರಡಿಸಿರುವ ಆದೇಶದಲ್ಲಿ ತಿಳಿಸಿರುವಂತೆ ಹೊಸ ವಿದ್ಯುತ್ ಸಂಪರ್ಕ ಕಲ್ಪಿಸುವ ಸಂಬಂಧ ಇರುವ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಇಂಧನ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 14. | ಟಿ.ಎನ್. ಜವರಾಯಿ ಗೌಡ | 12.08.2025 | ಸಾಮಾಜಿಕ ಹೊಣೆಗಾರಿಕೆ ಯೋಜನೆಯಡಿ (ಸಿ.ಎಸ್.ಆರ್ ಅನುದಾನದಡಿ) ಬೆಂಗಳೂರು ನಗರದಲ್ಲಿ ಸರ್ಕಾರಿ ಶಾಲೆಗಳನ್ನು ತುರ್ತಾಗಿ ದುರಸ್ಥಿಪಡಿಸುವ ಬಗ್ಗೆ | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 15. | ಡಾ: ತಳವಾರ್ ಸಾಬಣ್ಣ | 12.08.2025 | ಕಲಬುರ್ಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಬರುವ ಕೊಂಕನಹಳ್ಳಿ ಗ್ರಾಮದಲ್ಲಿ ನೆಟ್ಟಿರುವ ಹಾಗೂ ನಾಮಫಲಕವನ್ನು ತೆರವುಗೊಳಿಸದೆ ಉಳಿಸುವ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 16. | ರಾಮೋಜಿಗೌಡ | 12.08.2025 | ರಾಜ್ಯದ ಎಲ್ಲಾ ಮಲ್ಟಿಪ್ಲೆಕ್ಸ್ ಮತ್ತು ಚಿತ್ರ ಮಂದಿರಗಳಲ್ಲಿ ಏಕರೂಪದ ದರ ಜಾರಿಗೊಳಿಸಿ ಸರ್ಕಾರ ಆದೇಶಿಸಿದ್ದರೂ, ಕೆಲವು ಮಲ್ಟಿಪ್ಲೆಕ್ಸ್‌ಗಳಲ್ಲಿ ಪರಭಾಷಾ ಚಿತ್ರಗಳಿಗೆ ಹೆಚ್ಚಿನ ದರ ನಿಗದಿಪಡಿಸಿರುವ ಬಗ್ಗೆ | | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 17. | ಮಂಜುನಾಥ್ ಭಂಡಾರಿ | 12.08.2025 | ಭೂ ಪರಿವರ್ತಿತ ಜಮೀನಿನ ಏಕವಿನ್ಯಾಸ ನಕ್ಷೆಗಳಿಗೆ ಜಿಲ್ಲಾ ಕೇಂದ್ರ ಅನುಮೋದನೆ ಪಡೆಯಬೇಕಾಗಿರುವುದರಿಂದ ತೊಂದರೆಯಾಗುತ್ತಿದ್ದು, ಯೋಜನಾ ಪ್ರದೇಶದ ವ್ಯಾಪ್ತಿಯಿಂದ ಹೊರಗಿರುವ ಗ್ರಾಮ ಪಂಚಾಯತಿಗಳಿಗೆ ಪ್ರತ್ಯೇಕ ಗ್ರಾಮಾಂತರ ಯೋಜನೆ ರೂಪಿಸಿ ಸರಳ ನಿಯಮಗಳನ್ನು ಅಳವಡಿಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 18. | ನಿರಾಣಿ ಹಣಮಂತ್ ರುದ್ರಪ್ಪ | 12.08.2025 | ಮಾತೃ ಭಾಷೆ ಕೊಂಕಣಿ ಎಂಬ ಕಾರಣದಿಂದ ಕಾಸರಗೋಡಿನ ಕನ್ನಡ ವಿದ್ಯಾರ್ಥಿಗಳಿಗೆ ಕರ್ನಾಟಕದಲ್ಲಿ ಉನ್ನತ ಶಿಕ್ಷಣ ನಿಷೇಧ ಮಾಡಿರುವ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಕೃಷಿ ಸಚಿವರು ಉತ್ತರಿಸಿದರು. |
| 19. | ಗೋವಿಂದರಾಜು | 12.08.2025 | ಕೋಲಾರ ಜಿಲ್ಲೆ, ಕೆಜಿಎಫ್‌ನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಉತ್ತಮ ಗುಣಮಟ್ಟದ ಪರಿಕರಗಳನ್ನು ವಿತರಿಸಿ ಕೊಳವೆ ಬಾವಿ ಕೊರೆಸುವ ಬಗ್ಗೆ | | ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 20. | ಎಂ. ನಾಗರಾಜು | 12.08.2025 | ನೆಲಮಂಗಲದ ಅರಶಿನಕುಂಟೆ ಬಿನ್ನಮಂಗಲದ ಕೆರೆಗಳ ನೀರು ಕಲುಷಿತಗೊಂಡಿದ್ದು, ಬಳಕೆಗೆ ಯೋಗ್ಯವಾಗುವಂತೆ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರಿಸಿದರು. |

| | | | | | |
|---|---|---|---|---|---|
| 21. | ಶರವಣ ಟಿ.ಎ | 12.08.2025 | ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಅಪೂರ್ಣಗೊಂಡಿರುವ ಮನೆಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 22. | ಕಿಶೋರ್ ಕುಮಾರ್ ಪುತ್ತೂರ್ | 12.08.2025 | ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿರುದ್ಧ ಸುಳ್ಳು ಸುದ್ದಿ ಹರಡುತ್ತಿರುವ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 23. | ಸಿ.ಟಿ. ರವಿ | 12.08.2025 | ರಾಜ್ಯದ ವಿವಿಧ ಭಾಗಗಳಲ್ಲಿ ಗೋಹತ್ಯೆ ಪ್ರಕರಣಗಳು ನಡೆಯುತ್ತಿರುವ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 24. | ಕೇಶವ ಪ್ರಸಾದ್ ಎಸ್ | 13.08.2025 | ಮಂಡ್ಯ ಜಿಲ್ಲೆ, ಆಲಕೇರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಮಧ್ಯಾಹ್ನ ಬಿಸಿ ಊಟ ಯೋಜನೆಯಡಿ ಮೊಟ್ಟೆ ವಿತರಿಸುವ ಕುರಿತು ಪೋಷಕರಿಂದ ವಿರೋಧ ವ್ಯಕ್ತವಾಗಿರುವ ಕುರಿತು | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 25. | ರಾಮೋಜಿಗೌಡ | 13.08.2025 | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪಿಸಿ ಜಾಬ್ ಕಾರ್ಡ್ (ಎಂಪ್ಲಾಯಮೆಂಟ್ ಕಾರ್ಡ್) ಮಾಡಿಸುವ ಪ್ರಕ್ರಿಯೆಗೆ ಚಾಲನೆ ನೀಡುವ ಬಗ್ಗೆ | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 26. | ತಿಪ್ಪಣ್ಣಪ್ಪ ಕಮಕನೂರ | 13.08.2025 | 2012ರಲ್ಲಿ ಆಫ್ರಿಕನ್ ಕ್ಯಾಟ್‌ಫಿಶ್‌ಗಳ ಸಾಕಾಣಿಕೆಯನ್ನು ಸರ್ಕಾರ ನಿಷೇಧಿಸಿದ್ದರೂ, ಅಕ್ರಮವಾಗಿ ಸಾಕಾಣಿಕೆ ಮಾಡುತ್ತಿರುವುದು ಜನರ ಅನಾರೋಗ್ಯಕ್ಕೆ ಕಾರಣವಾಗಿರುವುದರಿಂದ ಕಟ್ಟುನಿಟ್ಟಾಗಿ ಇದನ್ನು ನಿಯಂತ್ರಿಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು**<br><br>**ಉತ್ತರಿಸಲಾಗಿದೆ** | ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಉತ್ತರಿಸಿದರು. |
| 27. | ಪಿ.ಹೆಚ್. ಪೂಜಾರ್ | 13.08.2025 | ಬಾಗಲಕೋಟೆ ಜಿಲ್ಲೆ ಹುನಗುಂದ ಪುರಸಭೆಯ ವ್ಯಾಪ್ತಿಯಲ್ಲಿ ಸರ್ಕಾರದ ಅನುದಾನದಡಿ ನಿರ್ಮಿಸಿದ ಶೌಚಾಲಯ ಹಾಗೂ ಕಟ್ಟಡಗಳ ಸೂಕ್ತ ನಿರ್ವಹಣೆ ಆಗದಿರುವ ಬಗ್ಗೆ ಹಾಗೂ ಮಾರುಕಟ್ಟೆ ಅವ್ಯವಸ್ಥೆ ಬಗ್ಗೆ | | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ<br>ಮಾನ್ಯ ಸಭಾನಾಯಕರು ತಿಳಿಸಿದರು. |
| 28. | ಟಿ.ಎನ್. ಜವರಾಯಿ ಗೌಡ | 13.08.2025 | ನೈಸ್ ಸಂಸ್ಥೆಯ ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿ.ಎಂ.ಐ.ಸಿ) ಯೋಜನೆಯ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 29. | ಎಂ. ನಾಗರಾಜು | 13.08.2025 | ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿನ ಕೊಠಡಿಗಳನ್ನು ದುರಸ್ಥಿಗೊಳಿಸುವ ಬಗ್ಗೆ | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ<br>ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 30. | ಪ್ರತಾಪ್ ಸಿಂಹ ನಾಯಕ್ ಕೆ. | 13.08.2025 | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಪರಿವರ್ತನೆಗೊಳಿಸುವ ಜಮೀನಿಗೆ ಸರ್ಕಾರಿ ರಸ್ತೆ ಸಂಪರ್ಕ ಹೊಂದಿದ್ದರೆ ಮಾತ್ರ ಭೂ ಪರಿವರ್ತನೆ ಮಾಡುವ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ದೊರಕುತ್ತಿದ್ದ 9/11ಎ ಖಾತಾ ದೃಢೀಕರಣ ಪತ್ರವನ್ನು ಸ್ಥಳೀಯ ಯೋಜನಾ ಪ್ರಾಧಿಕಾರಕ್ಕೆ ವರ್ಗಾಯಿಸಿರುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 31. | ಬಿ.ಕೆ. ಹರಿಪ್ರಸಾದ್ | 13.08.2025 | ರಾಜ್ಯದಲ್ಲಿ ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ನೀಡುತ್ತಿರುವ ಪಿಂಚಣಿಯನ್ನು ಹೆಚ್ಚಿಸುವ ಹಾಗೂ ವಿಶೇಷ ಸೌಲಭ್ಯದಡಿ ಹಂಚಿಕೆ ಮಾಡುವ ಬಗ್ಗೆ | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 32. | ಕೆ. ಅಬ್ದುಲ್ ಜಬ್ಬಾರ್ | 13.08.2025 | ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೆರೆಬಿಳಚಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸ್ತ್ರೀರೋಗ ತಜ್ಞರ ವರ್ಗಾವಣೆ ಹಾಗೂ ಹುದ್ದೆಗಳನ್ನು ಕಡಿತಗೊಳಿಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 33. | ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) | 13.08.2025 | ರಾಷ್ಟ್ರೀಯ ಶಿಕ್ಷಣ ನೀತಿ (ಎನ್ಇಪಿ) ಜಾರಿಗೊಳಿಸುವ ಹಾಗೂ ಶಿಕ್ಷಣ ಇಲಾಖೆಯಲ್ಲಿ ಅನುಕಂಪದ ಆಧಾರದ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವ ಕುರಿತು | | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 34. | ಶಶೀಲ್ ಜಿ. ನಮೋಶಿ | 13.08.2025 | ರಾಜ್ಯದ ಸಾವಿರಾರು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಮಸ್ಯೆಗಳನ್ನು ಬಗೆಹರಿಸುವ ಕುರಿತು | | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 35. | ಬಲ್ಕೀಸ್ ಬಾನು | 13.08.2025 | ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ ಹಿಂಬದಿ ಮುಖ್ಯರಸ್ತೆ ಬದಿಯಲ್ಲಿರುವ ಜಮೀನಿನ ಮಾಲೀಕರು ಹಿಂಬದಿ ಜಮೀನುಗಳಿಗೆ ಹೋಗುವ ಯುವಕರನ್ನು ಮರಕ್ಕೆ ಕಟ್ಟಿ ಹಲ್ಲೆ ಮಾಡಿರುವ ಬಗ್ಗೆ | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 36. | ಐವನ್ ಡಿ'ಸೋಜಾ | 13.08.2025 | ಮಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಅಳವಡಿಸಿರುವ ಜಾಮರ್‌ನಿಂದಾಗಿ ಉಂಟಾಗಿರುವ ಸಮಸ್ಯೆಗಳ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರು ಉತ್ತರಿಸಿದರು. |
| 37. | ಹೇಮಲತಾ ನಾಯಕ | 13.08.2025 | ಕೊಪ್ಪಳ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಿಂದ ಕೇಂದ್ರೀಯ ವಿದ್ಯಾಲಯದ ತನಕ ಚತುಷ್ಪಥ ರಸ್ತೆ ನಿರ್ಮಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಬಗ್ಗೆ | **ದಿ: 14.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 38. | ಮಂಜುನಾಥ್ ಭಂಡಾರಿ | 13.08.2025 | ಉಡುಪಿ ಜಿಲ್ಲೆಯಲ್ಲಿ ಗ್ರಾಮ ಸಡಕ್ ಯೋಜನೆಯಡಿ ನಿರ್ಮಿತವಾದ ರಸ್ತೆಗಳು ದುರಸ್ಥಿತಿಯಾಗಿದ್ದು, ಕೂಡಲೇ ಸರಿಪಡಿಸಲು ಕ್ರಮಕೈಗೊಳ್ಳುವ ಬಗ್ಗೆ | | ಮಾನ್ಯ ಲೋಕೋಪಯೋಗಿ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 39. | ಬಿ.ಜಿ. ಪಾಟೀಲ್ | 13.08.2025 | ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲ್ಲೂಕಿನ ವಾಡಿ ಪಟ್ಟಣದ ಬಸವಮಣಿ ನಿವಾಸಿಗಳಿಗೆ ಹಕ್ಕುಪತ್ರ ನೀಡುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಕಂದಾಯ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 40. | ಚಿದಾನಂದ್ ಎಂ. ಗೌಡ | 13.08.2025 | ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು ಉತ್ತರಿಸಲಾಗಿದೆ** | ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು. |
| 41. | ಎನ್. ರವಿಕುಮಾರ್ | 13.08.2025 | ಬೆಂಗಳೂರು ನಗರ ಒಳಗೊಂಡಂತೆ ರಾಜ್ಯದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ | | ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 42. | ಶಾಂತಾರಾಮ್ ಬುಡ್ನ ಸಿದ್ದಿ, ಬಲ್ಕೀಸ್ ಬಾನು, ರಾಮೋಜಿಗೌಡ, ಹೇಮಲತಾ ನಾಯಕ | 14.08.2025 | ರಾಜ್ಯದ ಆಶಾಕಾರ್ಯಕರ್ತೆಯರು ಗೌರವಧನ ಹೆಚ್ಚಳ ಹಾಗೂ ಇನ್ನಿತರೆ ಬೇಡಿಕೆಗಳನ್ನು ಈಡೇರಿಸಬೇಕೆಂದು ಧರಣಿ ನಡೆಸುತ್ತಿರುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 43. | ಡಿ.ಎಸ್. ಅರುಣ್ | 14.08.2025 | ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ನಿಧನ ಹೊಂದಿದ ವ್ಯಕ್ತಿಯ ಹೆಸರಿನಲ್ಲಿ ಡಯಾಲಿಸಿಸ್ ಚಿಕಿತ್ಸೆ ಪಡೆದಿರುವಂತೆ ನಕಲಿ ದಾಖಲೆ ಸೃಷ್ಟಿಸಿರುವ ಬಗ್ಗೆ | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 44. | ಶರವಣ ಟಿ.ಎ | 14.08.2025 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ಮಿಸಲು ಉದ್ದೇಶಿಸಿರುವ ಬಡಾವಣೆಯ ಮುಂದುವರೆದ ಭಾಗ ಹಾಗೂ ಹೊಸ ಬಡಾವಣೆ ಬರಲಿರುವ ಪ್ರದೇಶಗಳಲ್ಲಿ ಸ್ಥಳೀಯರು ನಿರ್ಮಿಸಿಕೊಳ್ಳುವ ಸ್ವಂತ ಮನೆಗಳಿಗೆ ವಿದ್ಯುತ್ ಸಂಪರ್ಕ ಮತ್ತು ಎನ್‌ಒಸಿ ನೀಡಿ ಅನುಕೂಲ ಮಾಡಿಕೊಡುವ ಬಗ್ಗೆ | **ಉತ್ತರಿಸಲಾಗಿದೆ** | ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಿಸಿದರು. |
| 45. | ಪಿ.ಹೆಚ್. ಪೂಜಾರ್ | 14.08.2025 | ಹುನಗುಂದ ತಾಲ್ಲೂಕಿನ ಬೇವಿನಾಳ ಮತ್ತು ಸುರಳಿಕಲ್ಲು ಗ್ರಾಮದ ನಡುವೆ ಬರುವ ನದಿಗೆ ನಿರ್ಮಿಸುವ ಬ್ರಿಡ್ಜ್-ಕಂ-ಬ್ಯಾರೇಜ್‌ಗಳಿಗೆ ಗೇಟ್‌ಗಳನ್ನು ಅಳವಡಿಸಿ ರೈತರ ಭೂಮಿ ನೀರು ಪಾಲಾಗದಂತೆ ತಡೆಗಟ್ಟುವ ಬಗ್ಗೆ | **ಉತ್ತರಿಸಲಾಗಿದೆ** | ಮಾನ್ಯ ಸಣ್ಣ ನೀರಾವಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಉತ್ತರಿಸಿದರು. |
| 46. | ಸಿ.ಟಿ. ರವಿ | 14.08.2025 | ಯುಜಿಸಿ ನಿಯಮಗಳ ಪ್ರಕಾರ ಪ್ರಥಮ ದರ್ಜೆಗಳಲ್ಲಿ ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಮಾನದಂಡಗಳು ಹೊಂದಿಲ್ಲದೆ ಇದ್ದರು ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳು ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಬಗ್ಗೆ | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 47. | ಐವನ್ ಡಿ'ಸೋಜಾ | 14.08.2025 | ಕರ್ನಾಟಕ ಕರಾವಳಿ ಭಾಗದಲ್ಲಿ ಜರುಗುವ ಕಂಬಳ ಕ್ರೀಡೆಗೆ ಸರ್ಕಾರವು ದಿನಾಂಕ:19.12.2024ರಂದು ಹೊರಡಿಸಿರುವ ಆದೇಶದಲ್ಲಿ 24 ಕಂಬಳಗಳಿಗೆ ತಲಾ 5ಲಕ್ಷ ರೂ. ನೀಡುವಂತೆ ಘೋಷಣೆಯಾಗಿದ್ದರೂ ಪೂರ್ಣ ಪ್ರಮಾಣದಲ್ಲಿ ಬಿಡುಗಡೆಯಾಗದಿರುವ ಬಗ್ಗೆ | | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 48. | ಬಿ.ಕೆ. ಹರಿಪ್ರಸಾದ್ | 14.08.2025 | ರಾಜ್ಯದಲ್ಲಿ ಈಡಿಗ/ಬಿಲ್ಲವ ಸಮಾಜದ ಉದ್ದಿಮೆದಾರರಿಗೆ ಶೇ.20ರಷ್ಟು ಲಾಭಾಂಶ ನೀಡುವುದನ್ನು ಮುಂದುವರೆಸಿ ಹಾಲಿ ವಿಧಿಸಿರುವ ಶುಲ್ಕವನ್ನು ಹಿಂಪಡೆದು, ಸದರಿ ಸಮುದಾಯದ ಮೂಲ ಕಸುಬುದಾರರಿಗೆ ವ್ಯವಹಾರಿಕ ಲಾಭಾಂಶವನ್ನು ನೀಡುವ ಸಂಬಂಧ ಸಮಿತಿಯನ್ನು ರಚಿಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು**<br>**ಉತ್ತರಿಸಲಾಗಿದೆ** | ಮಾನ್ಯ ಅಬಕಾರಿ ಸಚಿವರು ಉತ್ತರಿಸಿದರು. |
| 49. | ಡಾ: ತಳವಾರ್ ಸಾಬಣ್ಣ | 14.08.2025 | ಜಾನಪದ ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಪಾವತಿಸುವ ಬಗ್ಗೆ | **ದಿ: 18.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 50. | ಸಿ.ಎನ್. ಮಂಜೇಗೌಡ<br>ಎಸ್.ವ್ಹಿ. ಸಂಕನೂರ | 14.08.2025 | ಮೈಸೂರಿನಲ್ಲಿ ಡ್ರಗ್ಸ್ ಮಾಫಿಯಾ ಹಾಗೂ ಮಾದಕ ವಸ್ತುಗಳ ಪ್ರಕರಣಗಳು ವರದಿಯಾಗಿದ್ದು, ಉನ್ನತ ಮಟ್ಟದ ತನಿಖೆ ನಡೆಸಿ NDPS & COTPA ಕಾಯ್ದೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 51. | ಬಸನಗೌಡ ಬಾದರ್ಲಿ | 14.08.2025 | ಸಿಂಧನೂರು ನಗರದ ಮಧ್ಯಭಾಗದಲ್ಲಿ ತೋಟಗಾರಿಕೆ ಇಲಾಖೆಯ 19 ಎಕರೆ ಭೂಮಿಯನ್ನು ಸದ್ಬಳಕೆ ಮಾಡಿಕೊಂಡು ಹಣ್ಣುಗಳನ್ನು ಬೆಳೆಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 52. | ಸಿ.ಎನ್. ಮಂಜೇಗೌಡ | 18.08.2025 | ಮೈಸೂರು ವಿಶ್ವವಿದ್ಯಾಲಯದಲ್ಲಿ ನಿವೃತ್ತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ನಿವೃತ್ತಿ ವೇತನ ಬಿಡುಗಡೆ ಮಾಡದಿರುವ ಬಗ್ಗೆ | | ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 53. | ಬಲ್ಕೀಸ್ ಬಾನು | 18.08.2025 | 2010-11ನೇ ಸಾಲಿನಲ್ಲಿ ಭದ್ರಾವತಿಯ ಎಂಪಿಎಂ ಸಕ್ಕರೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡಿರುವ ರೈತರಿಗೆ ಪ್ರೋತ್ಸಾಹಧನ ನೀಡಲು ಬಾಕಿ ಉಳಿಸಿಕೊಂಡಿರುವ ಬಗ್ಗೆ | | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 54. | ಟಿ.ಎನ್. ಜವರಾಯಿ ಗೌಡ | 18.08.2025 | ಬೆಂಗಳೂರು ನಗರ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಅಕ್ರಮವಾಗಿ ನ್ಯಾಯಾಲಯದ ಆದೇಶವಿಲ್ಲದೇ 6 ದಿವಸಗಳವರೆಗೆ ವ್ಯಕ್ತಿಯೊಬ್ಬರನ್ನು ಬಂಧಿಸಿ ದೈಹಿಕ ಮತ್ತು ಮಾನಸಿಕವಗಿ ಹಲ್ಲೆ ಮಾಡಿರುವ ಬಗ್ಗೆ | | ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 55. | ಡಾ: ತಳವಾರ್ ಸಾಬಣ್ಣ | 18.08.2025 | ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಗ್ರೇಡ್-1 ಪ್ರಾಂಶುಪಾಲರ ಹುದ್ದೆಗಳ ಅಂತಿಮ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |

| | | | | | |
|---|---|---|---|---|---|
| 56. | ಹೇಮಲತಾ ನಾಯಕ | 18.08.2025 | ತುಂಗಭದ್ರ ಜಲಾಶಯದ 8 ಗೇಟ್ ಜಾಮ್ ಆಗಿ ನಿಷ್ಕ್ರಿಯಗೊಂಡಿದ್ದು, ಕೇವಲ 80 ಟಿಎಂಸಿಗೆ ಸಂಗ್ರಹ ಸಾಮರ್ಥ್ಯ ಇಳಿಕೆಯಾಗಿದ್ದು, ನೀರಿನ ಪ್ರಮಾಣವನ್ನು ಹೆಚ್ಚಿಸಲು ಕೂಡಲೇ ಗೇಟ್ ಸರಿಪಡಿಸಿ ಎತ್ತರಿಸುವ ಸಂಬಂಧ ಸೂಕ್ತ ಕ್ರಮಕೈಗೊಳ್ಳುವ ಬಗ್ಗೆ | | ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 57. | ಭಾರತಿ ಶೆಟ್ಟಿ | 18.08.2025 | ಪ್ರೌಢ ಶಾಲೆ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿಗೆ ಏಕರೂಪದ ಅನುದಾನ ಹಂಚಿಕೆ ಆಗುತ್ತಿರುವುದರಿಂದ ಮೂಲಸೌಲಭ್ಯಗಳ ನಿರ್ವಹಣೆಯಲ್ಲಿ ಶಿಕ್ಷಕರ ನಡುವೆ ಗೊಂದಲು ಸೃಷಿಯಾಗಿರುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 58. | ಎಂ. ನಾಗರಾಜು | 18.08.2025 | ಬಾಲ್ಯ ವಿವಾಹದ ಪಿಡುಗನ್ನು ತಡೆಗಟ್ಟುವಲ್ಲಿ ವಿಫಲವಾಗಿರುವ ಪರಿಣಾಮ ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಾಗಿದ್ದು, ಇದರಿಂದ ಆಗುವ ಸಮಸ್ಯೆಗಳ ಬಗ್ಗೆ ಪೋಷಕರಲ್ಲಿ ಮತ್ತು ಬಾಲಕಿಯರಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 59. | ಮಂಜುನಾಥ್ ಭಂಡಾರಿ | 18.08.2025 | ಮಂಗಳೂರು ವಿಶ್ವವಿದ್ಯಾಲಯದಲ್ಲಿ 2018ರಿಂದ 2023ರ ಅವಧಿಯಲ್ಲಿ ತಾತ್ಕಾಲಿಕ ಹಾಗೂ ಹೊರಗುತ್ತಿಗೆ ಆಧಾರದಲ್ಲಿ ಲಭ್ಯವಿದ್ದ | | ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ |

| | | | | | |
|---|---|---|---|---|---|
| | | | ಹುದ್ದೆಗಳ ಸಂಖ್ಯೆ ಮೀರಿ 359 ಮಂದಿಯನ್ನು ನೇಮಕ ಮಾಡಿರುವ ಬಗ್ಗೆ | | ಮಾನ್ಯ ಸಭಾನಾಯಕರು ತಿಳಿಸಿದರು. |
| 60. | ಶಶೀಲ್ ಜಿ. ನಮೋಶಿ | 18.08.2025 | ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ನೀಡುವಾಗ ವಿಭಿನ್ನ ಕೆನೆಪದರ ನೀತಿಯನ್ನು ಅನುಸರಿಸುತ್ತಿರುವ ಬಗ್ಗೆ | | ಮಾನ್ಯ ಕಂದಾಯ ಸಚಿವರು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಾಹಿತಿ ಪಡೆದು ಉತ್ತರವನ್ನು ಒದಗಿಸುವುದಾಗಿ ತಿಳಿಸಿದರು. |
| 61. | ಕಿಶೋರ್ ಕುಮಾರ್ ಪುತ್ತೂರ್ | 18.08.2025 | ಧರ್ಮಸ್ಥಳದ ಪ್ರಕರಣಕ್ಕೆ ಸಂಬಂಧಿಸಿದಂತೆ ಅನಾಮಿಕ ದೂರುದಾರನ ಮಂಪರು ಪರೀಕ್ಷೆ ನಡೆಸಿ ವರದಿ ಬಂದ ನಂತರ ಕ್ರಮವಹಿಸದೆ SIT ರಚಿಸಿದ್ದು, 12 ಸ್ಥಳದಲ್ಲಿ ಯಾವುದೇ ಮಾಹಿತಿ ದೊರೆಯದೆ ಇರುವುದರಿಂದ ಧಾರ್ಮಿಕ ಶ್ರದ್ಧಾ ಕೇಂದ್ರವಾಗಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಗೌರವವನ್ನು ಉಳಿಸುವ ಬಗ್ಗೆ | **ದಿ: 22.08.2025 ರಂದು ಉತ್ತರವನ್ನು ಮಂಡಿಸಲಾಯಿತು** | ಮಾನ್ಯ ಗೃಹ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 62. | ಐವನ್ ಡಿ'ಸೋಜಾ | 19.08.2025 | ಕರಾವಳಿಯ ವೈದ್ಯಕೀಯ ಕಾಲೇಜುಗಳಲ್ಲಿ ಎಂಬಿಬಿಎಸ್ ಪ್ರವೇಶಕ್ಕ ತುಳು ಕೋಟಾದಡಿ ಸೀಟು ಹಂಚಿಕೆ ಮಾಡುವುದನ್ನು ನಿಲ್ಲಿಸಿರುವುದರಿಂದ, ಸರ್ಕಾರ ಮಧ್ಯ ಪ್ರವೇಶಿಸಿ ಸೂಕ್ತ ನಿಯಮ ರೂಪಿಸಿ ತುಳು ಭಾಷಾ ಮೆರಿಟ್ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ಬಗ್ಗೆ | | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಕೃಷಿ ಸಚಿವರು ತಿಳಿಸಿದರು. |

| | | | | | |
|---|---|---|---|---|---|
| 63. | ರಾಮೋಜಿಗೌಡ | 19.08.2025 | ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ 22ಕ್ಕೂ ಹೆಚ್ಚು ಅರಣ್ಯ ರಕ್ಷಕ ಮತ್ತು ಅರಣ್ಯ ಕಾವಲುಗಾರರ ಹುದ್ದೆಗಳು ಖಾಲಿ ಇರುವ ಬಗ್ಗೆ | | ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಕೃಷಿ ಸಚಿವರು ತಿಳಿಸಿದರು. |
| 64. | ಭಾರತಿ ಶೆಟ್ಟಿ<br>ಡಿ.ಟಿ. ಶ್ರೀನಿವಾಸ್(ಡಿ.ಟಿ.ಎಸ್) | 19.08.2025 | ಬಿಬಿಎಂಪಿ ಅಧೀನದಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿ ಶೇ.81ರಷ್ಟು ಬೋಧಕರ ಹುದ್ದೆ ಖಾಲಿ ಇರುವ ಬಗ್ಗೆ | | ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸುವುದಾಗಿ ಮಾನ್ಯ ಕೃಷಿ ಸಚಿವರು ತಿಳಿಸಿದರು. |
